**ಆದೇಶ**

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 72(3) ಹಾಗೂ ಸರ್ಕಾರದ ಅಧಿಸೂಚನೆ ನಂ: ಸಿಓ/201/ಸಿಎಲ್ಎಂ/2008, ದಿನಾಂಕ:27–05–2010 ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ, ಸಿ.ಎಸ್. ವೀರೇಶ್, ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಆದ ನಾನು ಶ್ರೀ ವೆಂಕಟೇಶ್ವರ ಗೃಹ ನಿರ್ಮಾಣ ಸಹಕಾರ ಸಂಘ ನಿ, ಬೆಂಗಳೂರು, ಈ ಸಂಘವನ್ನು ಸಮಾಪನೆಗೊಳಿಸಿ, ಸಮಾಪನಾಧಿಕಾರಿಯನ್ನು ನೇಮಕ ಮಾಡಿರುವ ಆದೇಶವನ್ನು ರದ್ದುಪಡಿಸಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸಂಘವನ್ನು ಪುನ:ಶ್ಚೇತನಗೊಳಿಸಿ ಆದೇಶಿಸಿದೆ.

ಪುನ:ಶ್ಚೇತನಗೊಂಡ ಸಂಘಕ್ಕೆ 2010–11 ರಿಂದ 2014–15ನೇ ಸಾಲುಗಳ ಅವಧಿಗೆ ಆಡಳಿತ ಮಂಡಳಿಗೆ ಕರ್ನಾಟಕ ಸಹಕಾರ ಸಂಘಗಳ ಚುನಾವಣೆ ನಡೆಸಲು ಚುನಾವಣಾಧಿಕಾರಿಯಾಗಿ ಶ್ರೀ ಟಿ. ಜಯಶೇಖರ್, ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು, ಸಹಕಾರ ಸಂಘಗಳ ಉಪ ನಿಬಂಧಕರು–1 ರವರ ಕಛೇರಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರನ್ನು ನೇಮಕ ಮಾಡಲಾಗಿದೆ. ಚುನಾವಣಾಧಿಕಾರಿಗಳು ಸಂಘದ ಉಪನಿಯಮಗಳನ್ವಯ ಆಡಳಿತ ಮಂಡಳಿ ನಿರ್ದೇಶಕರನ್ನು ಚುನಾಯಿಸಲು ಚುನಾವಣೆ ನಡೆಸತಕ್ಕದ್ದು ಹಾಗು ಚುನಾವಣಾ ಫಲಿತಾಂಶವನ್ನು ಸಂಬಂಧಿಸಿದ ಸಂಘಕ್ಕೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ಈ ಕಛೇರಿಗೆ ಸಲ್ಲಿಸತಕ್ಕದ್ದು.

**ಷರತ್ತುಗಳು**

1. ಸಂಘವು ಈ ಆದೇಶ ಹೊರಡಿಸಿದ ಒಂದು ತಿಂಗಳೊಳಗೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ನಿಯಮ ಹಾಗೂ ಸಂಘದ ಉಪನಿಯಮಗಳಲ್ಲಿ ಹೇಳಿರುವಂತೆ ಸರ್ವಸದಸ್ಯರ ಸಭೆ ಹಾಗೂ ಆಡಳಿತ ಮಂಡಳಿಯನ್ನು ರಚಿಸಲು ಕ್ರಮಕೈಗೊಳ್ಳತಕ್ಕದ್ದು.
2. ಚುನಾಯಿತ ಆಡಳಿತ ಮಂಡಳಿಯವರು ಸಂಘದ ನಗದು ಪುಸ್ತಕ, ಷೇರು ಲೆಡ್ಜರ್, ಇನ್ನಿತರೆ ದಾಖಲಾತಿಗಳು ಯಾರ ಬಳಿ ಇವೆಯೆಂದು ಪರಿಶೀಲಿಸಿ ಪಡೆಯತಕ್ಕದ್ದು.
3. ಸಂಘದ 95–96 ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಲಭ್ಯವಿದ್ದು, ನಂತರ ಲೆಕ್ಕಪರಿಶೋಧನೆ ನಡೆದಿರುವ ಬಗ್ಗೆ ಪರಿಶೀಲಿಸತಕ್ಕದ್ದು ಹಾಗೂ ಸಂಬಂಧಪಟ್ಟ ಇಲಾಖೆಯಲ್ಲಿ ವ್ಯವಹರಿಸಿ ಪಡೆಯತಕ್ಕದ್ದು.
4. ಸಂಘದ ಆಸ್ತಿ–ಜವಾಬ್ದಾರಿಗಳನ್ನು ಹಾಗೂ ಚಾಲ್ತಿ ಲೆಕ್ಕಗಳನ್ನು ಹಾಲಿ ಇರುವಂತೆಯೇ ಮುಂದುವರೆಸಿಕೊಂಡು ಹೋಗತಕ್ಕದ್ದು.
5. ಸಮಾಪನಾಧಿಕಾರಿಗಳು ಚುನಾವಣೆ ನಡೆದ ನಂತರ ನೂತನ ಆಡಳಿತ ಮಂಡಳಿಗೆ ಅಧಿಕಾರ ವಹಿಸಿಕೊಡುವುದು. ಹಾಗೂ ಸಮಾಪನಾಧಿಕಾರಿಗಳು ತಮ್ಮ ಅವಧಿಯಲ್ಲಿ ವ್ಯವಹಾರ ಮಾಡಿದ್ದಲ್ಲಿ ಲೆಕ್ಕಗಳನ್ನು ಅಳವಡಿಸಿಕೊಂಡು ಲೆಕ್ಕಪರಿಶೋಧನೆಗೆ ಒಳಪಡಿಸಿಕೊಳ್ಳಲು ಆಡಳಿತ ಮಂಡಳಿಯವರು ಕ್ರಮಕೈಗೊಳ್ಳತಕ್ಕದ್ದು.
6. ನೂತನವಾಗಿ ಚುನಾಯಿತರಾದ ಆಡಳಿತ ಮಂಡಳಿಯವರು ನ್ಯಾಯಾಲಯ/ಕಛೇರಿಗಳಲ್ಲಿರುವ ವ್ಯಾಜ್ಯ ಮತ್ತು ಸಂಘದ ಜವಾಬ್ದಾರಿಗಳಿಗೆ ಸಂಪೂರ್ಣ ಹೊಣೆಗಾರರಾಗಿರುತ್ತಾರೆ.
7. ಸಂಘವು ಕಾರ್ಯನಿರ್ವಹಿಸುವಾಗ ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ರವರ ಆದೇಶ ಸಂಖ್ಯೆ: ಹೆಚ್ಎಸ್ಜಿ–1/184/ಹೆಚ್ಹೆಚ್ಎಸ್/2007–08, ದಿನಾಂಕ:29–3–2008ರ ನಿರ್ದೇಶನಗಳು ಮತ್ತು ಸುತ್ತೋಲೆ ಸಂಖ್ಯೆ:ಆರ್ಎಸ್ಆರ್/226/ಎಕ್ಸ್ಎಂಸಿ/2007–08, ದಿನಾಂಕ:29–03–2008 ನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸತಕ್ಕದ್ದು ಹಾಗೂ ಈ ಬಗ್ಗೆ ಸಂಘದ ಉಪನಿಯಮದಲ್ಲಿ ಅಳವಡಿಸಿಕೊಳ್ಳಲು ಸೂಕ್ತ ಕ್ರಮಕೈಗೊಳ್ಳತಕ್ಕದ್ದು.

ಈ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿ ಮೊಹರಿನೊಂದಿಗೆ ಈ ದಿನ ದಿನಾಂಕ:03–08–2010 ರಂದು ಹೊರಡಿಸಿರುತ್ತೇನೆ.

**ಸಿ.ಎಸ್. ವೀರೇಶ್,**
ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು.
ಬೆಂಗಳೂರು ಪ್ರಾಂತ, ಬೆಂಗಳೂರು.

ಪಿಆರ್–1419

**ಸಹಕಾರ ಇಲಾಖೆ**

**ಸಹಕಾರ ಸಂಘಗಳ ಸಂಯುಕ್ತ ನಿಬಂಧಕರ ಕಾರ್ಯಾಲಯ, ಬೆಂಗಳೂರು ಪ್ರಾಂತ, ಚಾಮರಾಜಪೇಟೆ, ಬೆಂಗಳೂರು–18.**

**ಸಂ. ಜೆಆರ್‌ಬಿ/ಸಮಾಪನೆ/39/84–85/10–11, ದಿನಾಂಕ:1ನೇ ಸೆಪ್ಟೆಂಬರ್ 2010**

**ವಿಷಯ :** ಸಮಾಪನೆಯಲ್ಲಿರುವ ಚಳ್ಳಕೆರೆ ತಾಲ್ಲೂಕು ವಿಶ್ವಕರ್ಮ ಕೈಗಾರಿಕಾ ಸಹಕಾರ ಸಂಘ ನಿ., ಇದರ ನೋಂದಣಿ ರದ್ದುಗೊಳಿಸುವ ಬಗ್ಗೆ

**ಉಲ್ಲೇಖ :** 1) ಈ ಕಛೇರಿಯ ಸಮಸಂಖ್ಯೆಯ ಆದೇಶದ ದಿನಾಂಕ:13–01–86.

2) ಸಹಕಾರ ಸಂಘಗಳ ಉಪ ನಿಬಂಧಕರು, ಚಿತ್ರದುರ್ಗ ಜಿಲ್ಲೆ ಇವರ ಪತ್ರದ ಸಂಖ್ಯೆ:ಡಿಆರ್‌ಡಿ/ಸಮಾಪನೆ/ರದ್ಧತಿ/ಸಿಆರ್/70/1985–86, ದಿನಾಂಕ:27–03–2010.

**ಪ್ರಸ್ತಾವನೆ:**

ಚಳ್ಳಕೆರೆ ತಾಲ್ಲೂಕು ವಿಶ್ವಕರ್ಮ ಕೈಗಾರಿಕಾ ಸಹಕಾರ ಸಂಘ ನಿ., ಚಳ್ಳಕೆರೆ, ಈ ಸಂಘವು ದಿನಾಂಕ:20–03–1964 ರಂದು ನೋಂದಣಿಯಾಗಿದ್ದು, ಸದರಿ ಸಂಘವು ಸಂಘದ ಕಾರ್ಯಚಟುವಟಿಕೆಗಳನ್ನು ನಿರ್ವಹಿಸದೇ ಇರುವುದರಿಂದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 72(2) ರನ್ವಯ ಉಲ್ಲೇಖ(1) ರಲ್ಲಿಯ ಆದೇಶದಲ್ಲಿ ಸಮಾಪನೆಗೊಳಿಸಿ ಸಹಕಾರ ಅಭಿವೃದ್ಧಿ ಅಧಿಕಾರಿ, ಚಳ್ಳಕೆರೆ ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ಸದರಿ ಸಮಾಪನಾಧಿಕಾರಿಯವರು ದಿನಾಂಕ:14–04–1996 ರಂದು ಪ್ರಭಾರ ವಹಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ.

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಸಹಾಯಕ ನಿರ್ದೇಶಕರು, ಚಿತ್ರದುರ್ಗ ಉಪವಿಭಾಗ, ಚಿತ್ರದುರ್ಗ ಇವರು ಸಂಘದ ಲೆಕ್ಕಪರಿಶೋಧನೆಯು 1972–73 ನೇ ಸಾಲಿನಿಂದ ಲೆಕ್ಕಪತ್ರಗಳು ಲಭ್ಯವಿಲ್ಲದ ಕಾರಣ ಬಾಕಿ ಉಳಿದಿದ್ದು ಲೆಕ್ಕಪರಿಶೋಧನಾ ವರದಿ ಲಭ್ಯವಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಸಮಾಪನಾಧಿಕಾರಿಯವರು ದಿನಾಂಕ:15–01–2010 ರಂದು ನಡೆಸಿದ ಸಮಾಪನೆ ನಡವಳಿಕೆಯಲ್ಲಿ ಸಂಘದ ಆಸ್ತಿ ಮತ್ತು ಜವಾಬ್ದಾರಿಗಳು ಕ್ರಮವಾಗಿ ರೂ.0.33 ಲಕ್ಷ ಮತ್ತು ರೂ.0.62 ಲಕ್ಷಗಳು ಇದ್ದು, ದಾಖಲೆಗಳು ಇಲ್ಲದೇ ಇರುವುದರಿಂದ ನಷ್ಟದ ಖಾತೆಗೆ ವರ್ಗಾಯಿಸಲು ತೀರ್ಮಾನಿಸಿ, ಆಸ್ತಿ–ಜವಾಬ್ದಾರಿ ತ:ಖ್ತೆಯನ್ನು ಶೂನ್ಯಗೊಳಿಸಿ, ಸರಿಯಾದ ದಾಖಲೆಗಳು ಇಲ್ಲದ ಪ್ರಯುಕ್ತ ನೋಂದಣಿ ಸಂಖ್ಯೆ ರದ್ದುಪಡಿಸುವಂತೆ, ಈ ಕಛೇರಿಗೆ ಶಿಫಾರಸ್ಸು ಮಾಡಿರುತ್ತಾರೆ.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಇವರ ವರದಿಯ ಮೇರೆಗೆ ಸಂಘದ ನೋಂದಣಿ ಸಂಖ್ಯೆಯನ್ನು ರದ್ದುಪಡಿಸುವುದು ಸೂಕ್ತವೆಂದು ಪರಿಗಣಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಆದೇಶ**

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 72 ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಓ/201/ಸಿಎಲ್‌ಎಂ/2008, ದಿನಾಂಕ:27–05–2010 ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಸಿ.ಎಸ್. ವೀರೇಶ್, ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಆದ ನಾನು ಚಳ್ಳಕೆರೆ ತಾಲ್ಲೂಕು, ವಿಶ್ವಕರ್ಮ ಕೈಗಾರಿಕಾ ಸಹಕಾರ ಸಂಘ ನಿ., ಚಳ್ಳಕೆರೆ, ಈ ಸಹಕಾರ ಸಂಘದ ನೋಂದಣಿ ಸಂಖ್ಯೆ:ಎಆರ್‌ಸಿ/793, ದಿನಾಂಕ:20–03–1964ನ್ನು ಕೂಡಲೇ ಜಾರಿಗೆ ಬರುವಂತೆ ರದ್ದುಪಡಿಸಿ ಆದೇಶ ಹೊರಡಿಸಿರುತ್ತೇನೆ.

ಈ ಆದೇಶದ ದಿನಾಂಕದಿಂದ ಸಂಘವು ಸಂಪೂರ್ಣವಾಗಿ ತನ್ನ ಅಸ್ತಿತ್ವವನ್ನು ಕಳೆದುಕೊಂಡು ವಿಸರ್ಜಿತವಾಗಿದೆ ಎಂದು ಪರಿಗಣಿಸತಕ್ಕದ್ದು. ಈ ಸಂಘಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 33(ಓ) ರನ್ವಯ 03 ವರ್ಷಗಳ ಕಾಲ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಚಿತ್ರದುರ್ಗ ಉಪವಿಭಾಗ, ಚಿತ್ರದುರ್ಗ ಇವರ ಕಾರ್ಯಾಲಯದಲ್ಲಿ ಕಾಯ್ದಿರಿಸತಕ್ಕದ್ದು.

ಈ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿ ಮೊಹರಿನೊಂದಿಗೆ ಈ ದಿನ ದಿನಾಂಕ:01–08–2010 ರಂದು ಹೊರಡಿಸಿರುತ್ತೇನೆ.

**ಸಿ.ಎಸ್. ವೀರೇಶ್,**

ಪಿಆರ್–1420

ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು.

ಬೆಂಗಳೂರು ಪ್ರಾಂತ, ಬೆಂಗಳೂರು.

## ಪ್ರಾಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಉಪ ಆಯುಕ್ತರು, ಕೋಲಾರ ಜಿಲ್ಲೆ, ಕೋಲಾರ ಇವರ ನ್ಯಾಯಾಲಯದಲ್ಲಿ

**ಪ್ರಕರಣ ಸಂಖ್ಯೆ: ಇಎಕ್ಸ್‌ಇ/49-184/ಮು/2005-06 ದಿನಾಂಕ: 31-12-2010**

**ಫಿರ್ಯಾದುದಾರರು**

ಪೊಲೀಸ್ ಸಬ್ ಇನ್ಸ್‌ಪೆಕ್ಟರ್,
ಅಪರಾಧ ವಿಭಾಗ,
ಕೋಲಾರ ನಗರ ಪೊಲೀಸ್ ಠಾಣೆ,
ಕೋಲಾರ.

**– ವಿರುದ್ದ –**

**ಅರ್ಜಿದಾರರು**

1. ಸಿ.ಎನ್. ಚೌಡರೆಡ್ಡಿ ಬಿನ್ ಸಿ.ನಾರಾಯಣಪ್ಪ, ವಯಸ್ಸು 28 ವರ್ಷ, ಒಕ್ಕಲಿಗ ಜನಾಂಗ, ನಾಯಂಡ್ರಹಳ್ಳಿ ಗ್ರಾಮ, ಚಿಂತಾಮಣಿ (ತಾ)
2. ಬಿ.ವಿ.ಮಂಜುನಾಥ್ ಬಿನ್ ವೆಂಕಟೇಶಪ್ಪ, ವಯಸ್ಸು 19 ವರ್ಷ, ಭೋವಿ ಜನಾಂಗ, ಭುವನಹಳ್ಳಿ, ಬಂಗಾರಪೇಟೆ ತಾಲ್ಲೂಕು

**ಅರ್ಜಿದಾರರು**

1. ಶ್ರೀಮತಿ ಸುಗುಣಾ ಕೋಂ ಟಿ.ಎಸ್.ಕೃಷ್ಣಮೂರ್ತಿ ಮೇಲಿನಪೇಟೆ, ಹೊಸಕೋಟೆ
2. ಶ್ರೀ ವಿ. ರಾಮಚಂದ್ರ, ಜಿ.ಪಿ.ಎ ಹೋಲ್ಡರ್, ವಿ.ವಿ.ಬಡಾವಣೆ, ಹೊಸಕೋಟೆ.

**ಪ್ರಕರಣದ ಮುಖ್ಯಾಂಶಗಳು:–**

ದಿನಾಂಕ: 29-03-2006 ರಂದು ಆರಕ್ಷಕ ಉಪ ನಿರೀಕ್ಷಕರು, ಅಪರಾಧ ವಿಭಾಗ, ಕೋಲಾರ ನಗರ ಪೊಲೀಸ್ ಠಾಣೆ, ಕೋಲಾರ ಮತ್ತು ಸಿಬ್ಬಂದಿ ಕೋಲಾರ ಹೊರ ವಲಯದ ಕೋಲಾರ – ಬೆಂಗಳೂರು ರಸ್ತೆಯಲ್ಲಿರುವ ಬೆಸ್ಕಾಂ ಕಛೇರಿ ಬಳಿ ಕಾಯುತ್ತಿರುವಾಗ ಸಂಜೆ 7-30 ಗಂಟೆಯಲ್ಲಿ ಕೆಎ–03-6139 ಎಂಬ ನೋಂದಿತ ಒಂದು ಪ್ಯಾಸೆಂಜರ್ ಟೆಂಪೋ ನರಸಾಪುರ ಕಡೆಯಿಂದ ಬರುತ್ತಿದ್ದು, ಅನುಮಾನಾಸ್ಪದವಾಗಿ ತಡೆದು ನಿಲ್ಲಿಸಿ ಪರಿಶೀಲಿಸಲಾಗಿ ವಾಹನದಲ್ಲಿ ಚಾಲಕ ಮತ್ತು ಕ್ಲೀನರ್ ಮಾತ್ರ ಇದ್ದು, ಒಳಗಡೆ ಸೀಟುಗಳ ಮಧ್ಯೆ ಮೂರು ಗೋಣಿ ಚೀಲಗಳಲ್ಲಿ ತಲಾ ಒಂದರಂತೆ ರಬ್ಬರ್ ಟ್ಯೂಬ್‌ಗಳಿದ್ದು, ಅವುಗಳಲ್ಲಿ ತಲಾ 50 ಲೀಟರ್‌ನಂತೆ ಒಟ್ಟು 150 ಲೀಟರ್ ಕಳ್ಳಭಟ್ಟಿ ಸಾರಾಯಿ ಇರುವುದು ಕಂಡುಬಂತು. ಇದನ್ನು ಸಾಗಾಣಿಕೆ ಮಾಡಲು ಪರವಾನಗಿ ವಗೈರೆ ಏನಾದರು ಇದೆಯಾ ಎಂದು ಕೇಳಲಾಗಿ ಏನು ಇಲ್ಲವೆಂದು ತಿಳಿಸಿದರು. ಟೆಂಪೋ ಚಾಲಕನ ಹೆಸರು ಮತ್ತು ವಿಳಾಸ ಕೇಳಲಾಗಿ ನನ್ನ ಹೆಸರು ಸಿ.ಎನ್.ಚೌಡರೆಡ್ಡಿ ಬಿನ್ ಸಿ.ನಾರಾಯಣಪ್ಪ, ವಯಸ್ಸು 28 ವರ್ಷ, ವಕ್ಕಲಿಗ ಜನಾಂಗ, ನಾಯಂಡ್ರಹಳ್ಳಿ ಗ್ರಾಮ, ಚಿಂತಾಮಣಿ ತಾಲ್ಲೂಕು ಎಂದು ಕ್ಲೀನರ್‌ನ ಹೆಸರು ಬಿ.ವಿ.ಮಂಜುನಾಥ್ ಬಿನ್ ವೆಂಕಟೇಶಪ್ಪ, ವಯಸ್ಸು 19 ವರ್ಷ, ಭೋವಿ ಜನಾಂಗ, ಭುವನಹಳ್ಳಿ, ಬಂಗಾರಪೇಟೆ ತಾಲ್ಲೂಕು ಎಂದು ತಿಳಿಸಿರುತ್ತಾರೆ. ಇದು ಕಳ್ಳಭಟ್ಟಿ ಸಾರಾಯಿ ಅಗಿದ್ದು, ಇದನ್ನು ಯಾರೋ ಕಟ್ಟಿಗೇನಹಳ್ಳಿ ವಾಸಿಗಳಿಂದ ಖರೀದಿಸಿದ್ದು, ಇದನ್ನು ಮಾರಾಟ ಮಾಡಿ ಅಕ್ರಮ ಲಾಭಗಳಿಸಲು ತಂದಿರುವುದಾಗಿ ತಿಳಿಸಿದರು. ನಂತರ ವಾಹನ, ಕಳ್ಳಭಟ್ಟಿ ಸಾರಾಯಿ ಮತ್ತು ಅಪರಾಧಿಗಳನ್ನು ಸ್ಥಳ ಮಹಜರ್ ಕ್ರಮ ಜರುಗಿಸಿ ವಶಕ್ಕೆ ತೆಗೆದುಕೊಂಡು, ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 32, 34 ರನ್ವಯ ಪ್ರವವ ಸಂ: 37, ರಂತೆ ಮೊಕದ್ದಮೆ ದಾಖಲಿಸಿರುತ್ತಾರೆ.

ದಿನಾಂಕ: 30-03-2006 ರಂದು ಮಾನ್ಯ ನ್ಯಾಯಾಲಯಕ್ಕೆ ಸ್ವತ್ತಿನ ಪಟ್ಟಿ (PF) ಸಲ್ಲಿಸಿ, ಜಫ್ತುಪಡಿಸಿರುವ ವಸ್ತುಗಳನ್ನು ಅಂತಿಮ ವರದಿ ನ್ಯಾಯಾಲಯಕ್ಕೆ ಸಲ್ಲಿಸುವವರಿಗೆ ತಮ್ಮ ವಶದಲ್ಲಿಟ್ಟುಕೊಳ್ಳಲು ಪೊಲೀಸ್ ಇಲಾಖೆಯವರು ಅನುಮತಿ ಪಡೆದಿರುತ್ತಾರೆ.

ಜಫ್ತುಪಡಿಸಿರುವ ವಾಹನದ ಜಿ.ಪಿ.ಎ ಹೊಂದಿರುವ ಶ್ರೀ ವಿ.ರಾಮಚಂದ್ರ ಬಿನ್ ವೆಂಕಟರಾಮಪ್ಪ, ವಿ.ವಿ.ಎಕ್ಸ್‌ಟೆನ್ಷನ್, ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ವಾಹನ ಬಿಡುಗಡೆಗೆ Cr.Pc ಕಲಂ 451 ಮತ್ತು 457 ರ ಅಡಿಯಲ್ಲಿ ಮಾನ್ಯ ಅಡಿಷನಲ್ ಸಿವಿಲ್ ಜಡ್ಜ್ (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ, ಕೋಲಾರ ಇವರ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಂಡ ನ್ಯಾಯಾಧೀಶರು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43(ಡಿ) ರ ಅಡಿಯಲ್ಲಿ ನೇಮಕಗೊಂಡ ಪ್ರಾಧಿಕೃತ ಅಧಿಕಾರಿಗಳು ಅಥವಾ ಕಲಂ 43(ಇ) ರನ್ವಯ ಅಪೀಲು ಸಲ್ಲಿಸಿ ಸತ್ರ ನ್ಯಾಯಾಧೀಶರಿಂದ ಬಿಡುಗಡೆಗೊಳಿಸಿಕೊಳ್ಳಬೇಕಾಗಿರುತ್ತದೆ ಎಂದು ತಿಳಿಸಿ, ಬೇರೆ ಯಾವುದೇ ಅಧಿಕಾರಿ, ನ್ಯಾಯಾಲಯ, ಟ್ರಿಬುನಲ್ ಇವರಿಗೆ ಅಧಿಕಾರವಿರುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಸಿ, ಈ ನ್ಯಾಯಾಲಯಕ್ಕೆ ಅಧಿಕಾರವಿಲ್ಲದ ಕಾರಣ ದಿನಾಂಕ: 05-04-2006 ರಂದು ಅರ್ಜಿಯನ್ನು ವಜಾಗೊಳಿಸಿರುತ್ತಾರೆ. ನಂತರ ದಿನಾಂಕ: 06-05-2006 ರ, ಈ ಪ್ರಾಧಿಕಾರದ ಆದೇಶದಂತೆ ದಿ: 15-05-2006 ರಂದು ವಾಹನ ಮತ್ತು ಇತರೆ ವಸ್ತುಗಳನ್ನು ಇಲಾಖೆಗೆ ವರ್ಗಾಯಿಸಿರುತ್ತಾರೆ.

ದಿನಾಂಕ: 19-04-2006 ರಂದು ಏಕಕಾಲದಲ್ಲಿ ಶ್ರೀ ವಿ.ರಾಮಚಂದ್ರ (ಜಿ.ಪಿ.ಎ ಹೋಲ್ಡರ್) ಮತ್ತು ಶ್ರೀ ಹೆಚ್.ಶಂಕರ್, ವಕೀಲರು, ಸಮಾಜ ಸೇವಕ (Social worker) ಮೇಲಿನಪೇಟೆ, ಹೊಸಕೋಟೆ ಇವರು ಒಂದೊಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅದರಲ್ಲಿ ಶ್ರೀ ವಿ.ರಾಮಚಂದ್ರ (ಜಿ.ಪಿ.ಎ ಹೋಲ್ಡರ್) ರವರು ಅವರ ಅರ್ಜಿಯಲ್ಲಿ ದಿನಾಂಕ: 29-03-2006 ರಂದು ಸುಮಾರು ಸಂಜೆ 6-30 ಗಂಟೆಯ ಸಮಯದಲ್ಲಿ ಶ್ರೀ ಟಿ.ಎಂ.ಬಾಲಪ್ಪ ಬಿನ್ ಚಿಕ್ಕಮುನಿವೆಂಕಟಪ್ಪ, ತಾವರೆಕೆರೆ ಗ್ರಾಮದ ವಾಸಿ, 2 ರಿಂದ 2-15 ಲೀಟರ್ ಕಳ್ಳಭಟ್ಟಿ ಸಾರಾಯಿ ಇರುವ ಒಂದು ಚೀಲವನ್ನು ಟೆಂಪೋ ಸಂ: ಕೆಎ–03-6139 ಎಂಬ ವಾಹನದ ಮೇಲೆ ಎಸೆದು ಆರಕ್ಷಕ ಉಪ ನಿರೀಕ್ಷಕರು, ಕೋಲಾರ ನಗರ ಪೊಲೀಸ್ ಠಾಣೆ ಇವರಿಗೆ ಮಾಹಿತಿ ನೀಡಿರುತ್ತಾನೆ ಎಂದು ತಿಳಿಸಿರುತ್ತಾರೆ. ಇದನ್ನು ಬಸ್ ನಿಲ್ದಾಣದಲ್ಲಿ ನಿಂತಿರುವ ಊರಿನ ಜನರು ಮತ್ತು ವಾಹನದಲ್ಲಿ ಹಿಂದಿನ ಸೀಟಿನಲ್ಲಿ ಕುಳಿತಿರುವ ಪ್ರಯಾಣಿಕರು ನೋಡಿರುತ್ತಾರೆಂದು ತಿಳಿಸಿ, ಅವರು ಹೆಸರು ಮತ್ತು ವಿಳಾಸ ತಿಳಿಸಿರುವುದಿಲ್ಲ.

ಶ್ರೀ ಹೆಚ್.ಶಂಕರ್, ವಕೀಲರವರು, ಅವರ ಅರ್ಜಿಯಲ್ಲಿ ದೇವರ ಕಾರ್ಯದ ಸಮಾರಂಭದಲ್ಲಿ ಭಾಗವಹಿಸಲು, ಕೋಲಾರಕ್ಕೆ ಹೋಗಬೇಕಾಗಿರುವುದರಿಂದ ಸದರಿ ವಾಹನದ ಮಾಲೀಕರು ಮತ್ತು ಚಾಲಕನನ್ನು ಕೇಳಿದಕ್ಕೆ ಅವರು ಒಪ್ಪಿಕೊಂಡಿದ್ದರ ಮೇರೆಗೆ ದಿನಾಂಕ: 29-03-2006 ರಂದು ಸಂಜೆ 6-45 ಗಂಟೆಯ ಸಮಯದಲ್ಲಿ ನಾನು ಮತ್ತು ಕುಟುಂಬ ಸದಸ್ಯರುಗಳು ಹೊಸಕೋಟೆಯಿಂದ ಪ್ರಯಾಣ ಮಾಡಿ ಹೋಗುತ್ತಿರುವಾಗ, ಮಧ್ಯದಲ್ಲಿ ಅಂದರೆ ತಾವರೆಕೆರೆ ಗ್ರಾಮದಲ್ಲಿ ಹೂವು ಮತ್ತು ಹಣ್ಣು ಖರೀದಿಸಲು ವಾಹನ ನಿಲ್ಲಿಸುವಂತೆ ವಿನಂತಿಸಿ, ವಾಹನ ನಿಲ್ಲಿಸಿದ ಸಮಯದಲ್ಲಿ ಒಬ್ಬ ಆಸಾಮಿಯ ಒಂದು ಚೀಲವನ್ನು ವಾಹನದ ಮೇಲೆ ಎಸೆದನೆಂದು, ಅದನ್ನು ಹಿಂದಿನ ಸೀಟಿನಲ್ಲಿ ಕುಳಿತಿರುವ ನನ್ನ ತಂಗಿ ನೋಡಿದಳೆಂದು, ಆದರೆ ಅದನ್ನು ಅವರಿಗೆ ತಿಳಿಸಲಿಲ್ಲವೆಂದು ಬರೆದಿರುತ್ತಾನೆ. ನಂತರ ವಾಹನ ಕೋಲಾರ ಹತ್ತಿರ ಬರುತ್ತಿದ್ದಾಗ, ಪೊಲೀಸ್ ಪೇದೆಯು ವಾಹನವನ್ನು ನಿಲ್ಲಿಸಿದ, ಅದೇ ಸಮಯಕ್ಕೆ ಕಳ್ಳಭಟ್ಟಿ ಸಾರಾಯಿ ಇರುವ ಚೀಲ ವಾಹನ ಮೇಲೆ ಎಸೆದಿದ್ದ ಆಸಾಮಿಯು ವಾಹನ ಹಿಂದುಗಡೆ ಜೀಪ್‌ನಲ್ಲಿ ಬಂದ, ವಾಹನ ನಿಲ್ಲಿಸಿದ ಪೇದೆ ಹೊರಟು ಹೋದ, ನಂತರ ಎರಡು ಜೀಪ್‌ಗಳಲ್ಲಿ ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್ ಮತ್ತು ಅಬಕಾರಿ ನಿರೀಕ್ಷಕರು ಬಂದರು ಪೊಲೀಸ್ ಪೇದೆ ನೇರವಾಗಿ ವಾಹನದ ಮೇಲಕ್ಕೆ ಹೋಗಿ ಎಸೆದಿರುವ ಕಳ್ಳಭಟ್ಟಿ ಸಾರಾಯಿ ಇರುವ ಚೀಲವನ್ನು ತಂದ ನಂತರ ಪೊಲೀಸ್ ಮತ್ತು ಅಬಕಾರಿ ಅಧಿಕಾರಿಗಳಿಗೆ ಯಾರೋ ತಿಳಿಯದ ಒಬ್ಬ ವ್ಯಕ್ತಿ ಈ ಚೀಲವನ್ನು ಎಸೆದನೆಂದು, ಚಾಲಕ ಮತ್ತು ಕ್ಲೀನರ್‌ಗಳದು ಏನೂ ತಪ್ಪಿಲ್ಲವೆಂದು ತಿಳಿಸಿದ ನಂತರ, ನೀವು ಸ್ಥಳಬಿಟ್ಟು ಹೊರಡಿ ಇಲ್ಲದಿದ್ದರೆ ನಿಮ್ಮ ಹೆಸರುಗಳನ್ನು ಪ್ರಥಮ ವರ್ತಮಾನ ವರದಿಯಲ್ಲಿ ಸೇರಿಸುವೆ ಎಂದು ತಿಳಿಸಿದರು. ನಂತರ ಮುಂದಿನ ಕ್ರಮ ಜರುಗಿಸಲು ಪೊಲೀಸ್ ಠಾಣೆಗೆ ಜಫ್ತುಪಡಿಸಿದ ಮಾಲುಗಳ ಸಮೇತ ಹೋದರು ಎಂದು ವಿವರಿಸಿರುತ್ತಾರೆ. ನಂತರ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ವಾಹನವನ್ನು ಬಿಡಲು ರೂ.10,000/- ಗಳನ್ನು ಕೊಡಿ ಎಂದು ವಾಹನ ಮಾಲೀಕನನ್ನು ಕೇಳಿದ, ಅದರಂತೆ ಹೊಸಕೋಟೆಯಲ್ಲಿರುವ ಅವರ ಸ್ನೇಹಿತನಿಗೆ ದೂರವಾಣಿ ಕರೆ ಮಾಡಿ ಹಣ ತರುವಂತೆ ತಿಳಿಸಿದ. ಅವರ ಸ್ನೇಹಿತನು ರೂ.6,000/- ಗಳು ಮಾತ್ರ ರಾತ್ರಿ 10-00 ಗಂಟೆಗೆ ತಂದ ಅದನ್ನು ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗೆ ನೀಡಿದರು. ತದನಂತರ ಪ್ರವವ ಯಲ್ಲಿ ವಾಹನ ಮೇಲೆ ಒಂದು ಚೀಲ ಇತ್ತೆಂದು ವಾಹನದೊಳಗೆ ಎರಡು ಚೀಲ ಇರುವಂತೆ ಬರೆಯಲು ರೈಟರಿಗೆ ತಿಳಿಸಿದ, ಇದನ್ನು ನಾನು ಪ್ರತಿಭಟಿಸಿದೆ. ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಸಹಕರಿಸದೆ, ನನ್ನನ್ನು ಠಾಣೆಯಿಂದ ಹೊರಗೆ ಹೋಗುವಂತೆ ತಿಳಿಸಿದರು. ಆದ್ದರಿಂದ ನಾನು ರಾತ್ರಿ 11-00 ಗಂಟೆಗೆ ಠಾಣೆಯಿಂದ ಹೊರಗೆಬಂದು ಬಿಟ್ಟೆ ಎಂದು ತಿಳಿಸಿ ಇದನ್ನು ವಿಚಾರಣೆ ಮಾಡುವಂತೆ ವಿನಂತಿಸಿಕೊಂಡಿರುತ್ತಾರೆ.

ಶ್ರೀ ವಿ.ರಾಮಚಂದ್ರ (GPA Holder) ರವರು ದಿನಾಂಕ: 05-05-2006 ರಂದು ಈ ಪ್ರಾಧಿಕಾರಕ್ಕೆ ಅರ್ಜಿಯನ್ನು ನೀಡಿ, ವಾಹನವನ್ನು ಮಧ್ಯಂತರ ಅವಧಿಗೆ ತಾತ್ಕಾಲಿಕವಾಗಿ ಬಿಡುಗಡೆ ಮಾಡಲು (Interim Custody) ಕೋರಿರುತ್ತಾರೆ.

ಸಾರಿಗೆ ಅಧಿಕಾರಿಗಳು ವಾಹನವನ್ನು ಪರಿಶೀಲಿಸಿ, ಇದರ ಮಾರುಕಟ್ಟೆ ಮೌಲ್ಯ ಸುಮಾರು ರೂ.1,00,000/- (ಒಂದು ಲಕ್ಷ) ಎಂದು ನಿಗದಿಪಡಿಸಿರುವ ಹಿನ್ನೆಲೆಯಲ್ಲಿ ರೂ.1,30,000/- ಗಳ ಬ್ಯಾಂಕ್ ಗ್ಯಾರಂಟಿ ಮತ್ತು ಇತರೆ ಷರತ್ತುಗಳೊಂದಿಗೆ ವಾಹನವನ್ನು ಮಾಲೀಕರ ತಾತ್ಕಾಲಿಕ ಸುಪರ್ದಿಗೆ ಬಿಡುಗಡೆ ಮಾಡಲು ದಿನಾಂಕ: 01-08-2006 ರಂದು ಆದೇಶ ನೀಡಲಾಯಿತು.

ಈ ಆದೇಶದ ವಿರುದ್ಧ, ಮಾನ್ಯ ಸತ್ರ ನ್ಯಾಯಾಧೀಶರು, ಕೋಲಾರ ರವರ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಮಾನ್ಯ ಸದರಿ ನ್ಯಾಯಾಧೀಶರು, ಅವರ ಆದೇಶ ಸಂ: ಸಿಆರ್‌ಎಲ್.ಎ.82/06 ದಿನಾಂಕ: 13-10-2006 ರಲ್ಲಿ ಪ್ರಾಧಿಕೃತ ಅಧಿಕಾರಿಗಳ ಆದೇಶವನ್ನು ಎತ್ತಿ ಹಿಡಿದು, ಮೇಲ್ಮನವಿಯನ್ನು ವಜಾಗೊಳಿಸಿರುತ್ತಾರೆ. ನಂತರ ಪ್ರಾಧಿಕೃತ ಅಧಿಕಾರದ ಆದೇಶ ಸಂ: ಇಎಕ್ಸ್‌ಇ/49/ಮು/2005-06 ದಿನಾಂಕ: 01-08-2006 ಮತ್ತು ಮಾನ್ಯ ಸತ್ರ ನ್ಯಾಯಾಧೀಶರ ಆದೇಶ ಸಂ: ಸಿಆರ್‌ಎಲ್.ಎ.82/2006 ದಿನಾಂಕ: 13-10-2006 ರ ಆದೇಶಗಳ ವಿರುದ್ಧ ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು ಇಲ್ಲಿ ಮೇಲ್ಮನವಿ ಸಲ್ಲಿಸಿ, ಈ ನ್ಯಾಯಾಲಯದ ಆದೇಶ ಸಂ: ಸಿಆರ್‌ಎಲ್.ಆರ್‌ಪಿ ನಂ.2201/2006 ದಿನಾಂಕ: 09-11-2006 ರಂತೆ ರೂ.1,30,000/- ಗಳ ಇಂಡೆಮ್ನಿಟಿ ಬಾಂಡ್ ಮತ್ತು ಪ್ರಾಧಿಕೃತ ಅಧಿಕಾರಿಗೆ ತೃಪ್ತಿಯಾಗುವಂತಹ, ಈ ಮೊತ್ತಕ್ಕೆ ಸಮನಾಗಿ ಜಾಮೀನುದಾರರನ್ನು ನೀಡಿ ಅಬಕಾರಿ ಅಧಿಕಾರಿಗಳು ವಶಪಡಿಸಿಕೊಂಡಿರುವ ವಾಹನವನ್ನು ಬಿಡುಗಡೆಗೊಳಿಸಿ ಕೊಳ್ಳುವಂತೆ ಆದೇಶಿಸಿರುವ ಮೇರೆಗೆ ಈ ಪ್ರಾಧಿಕಾರದ ಆದೇಶ ದಿನಾಂಕ: 23-11-2006 ರಂತೆ ದಿನಾಂಕ: 27-11-2006 ರಲ್ಲಿ ರೂ.1,30,000/- ಗಳಿಗೆ ಇಂಡೆಮ್ನಿಟಿ ಬಾಂಡ್ ಮತ್ತು ಆ ಮೊತ್ತಕ್ಕೆ ತಕ್ಕಂತೆ ಜಾಮೀನು ನೀಡಿ ವಾಹನವನ್ನು ಬಿಡುಗಡೆಗೊಳಿಸಿ ಕೊಂಡಿರುತ್ತಾರೆ. ಈ ಇಂಡೆಮ್ನಿಟಿ ಬಾಂಡ್‌ನಲ್ಲಿ ವಾಹನವನ್ನು ಯಾವಾಗ ಪ್ರಾಧಿಕಾರದ ಮುಂದೆ ಹಾಜರುಪಡಿಸುವಂತೆ ಆದೇಶ ನೀಡುತ್ತಾರೋ ಆ ದಿವಸ ಹಾಜರುಪಡಿಸುವೆನೆಂದು ವಾಗ್ದಾನ (Under taking) ನೀಡಿರುತ್ತಾರೆ.

ಜಪ್ತುಪಡಿಸಿರುವ ಕಳ್ಳಭಟ್ಟಿ ಸಾರಾಯಿ ಮಾದರಿಗಳನ್ನು ರಾಸಾಯನಿಕ ಪರೀಕ್ಷೆಗೊಳಪಡಿಸಲಾಗಿ, ರಾಸಾಯನಿಕ ತಜ್ಞರ ವರದಿ ಸಂ: ಸಿಎಸ್.312/2006 ದಿನಾಂಕ: 24-04-2006 ರಂತೆ ಸಾರಾಯಿಯ ಜೋರು 32% ವಿ.ವಿ ಇದ್ದು, ಇದರಲ್ಲಿ ಈಥೈಲ್ ಆಲ್ಕೋಹಾಲ್ ಕಂಡುಬಂದಿದ್ದು, ಮಾನವನ ಸೇವೆಗೆ ಯೋಗ್ಯವಾಗಿರುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆ.

ನಂತರ ವಾಹನವು ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಯಲ್ಲಿ ತೊಡಗಿರುವುದರಿಂದ ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43(ಎ) ರ ಅಡಿಯಲ್ಲಿ ಏಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬುದಕ್ಕೆ ಕಲಂ 43(ಬಿ) ರ ಅಡಿಯಲ್ಲಿ ಕಾರಣ ಕೇಳಿ ನೋಟೀಸ್ ದಿನಾಂಕ: 22-05-2006 ರಂದು ನೀಡಿ, ತಲುಪಿದ 7 ದಿವಸದೊಳಗಾಗಿ ಹೇಳಿಕೆ ನೀಡುವಂತೆ ಆದೇಶಿಸಲಾಗಿತ್ತು. ಈ ನೋಟೀಸ್‌ನ್ನು ದಿನಾಂಕ: 30-05-2006 ರಂದು ಅರ್ಜಿದಾರರ ವಕೀಲರಿಗೆ ಜಾರಿ ಮಾಡಿದ್ದು ದಿನಾಂಕ: 10-07-2006 ರಂದು ಅದರೆ 34 ದಿವಸಗಳ ತಡವಾಗಿ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ. ಈ ಹೇಳಿಕೆಯಲ್ಲಿ ಸದರಿ ಕೃತ್ಯಕ್ಕೂ ಅರ್ಜಿದಾರರಿಗೂ ಯಾವುದೇ ಸಂಬಂಧವಿಲ್ಲವೆಂದು ತಿಳಿಸಿರುತ್ತಾರೆ.

ಅಬಕಾರಿ ನಿರೀಕ್ಷಕರು, ಕೋಲಾರ ವಲಯ, ಕೋಲಾರ ರವರ ಪತ್ರದ ಸಂ: ಇಎಕ್ಸ್‌ಇ/ಕೋಉವಿ/ಕೆಟಿಸಿಆರ್/56/2005-06 ದಿನಾಂಕ: 08-02-2010 ರ ಮನವಿಯನ್ನು ಪುರಸ್ಕರಿಸಿ, ಅಬಕಾರಿ ಉಪ ಅಧೀಕ್ಷಕರು, ಕೋಲಾರ ಉಪ ವಿಭಾಗ, ಕೋಲಾರ ರವರ ಪತ್ರದ ದಿನಾಂಕ: 10-02-2010 ರಲ್ಲಿ ವಶಪಡಿಸಿಕೊಂಡಿರುವ ಕಳ್ಳಭಟ್ಟಿ ಸಾರಾಯಿಯನ್ನು ಮಾದರಿಯನ್ನು ಹೊರತುಪಡಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಆದೇಶ ನೀಡುವಂತೆ ಶಿಫಾರಸ್ಸು ಮಾಡಿರುವ ಮೇರೆಗೆ ಈ ಪ್ರಾಧಿಕರದ ಸಮ ಸಂಖ್ಯೆ ಆದೇಶದ ದಿನಾಂಕ: 02-03-2010 ರಲ್ಲಿ ಸರ್ಕಾರಕ್ಕೆ 150 ಲೀಟರ್ ಕಳ್ಳಭಟ್ಟಿ ಸಾರಾಯಿಯನ್ನು (ಮಾದರಿಯನ್ನು ಹೊರತುಪಡಿಸಿ) ಮುಟ್ಟುಗೋಲು ಹಾಕಿಕೊಂಡು ಹಾಗೆಯೇ ನಿಯಮಾನುಸಾರ ನಾಶಪಡಿಸುವಂತೆ ಆದೇಶ ನೀಡಲಾಗಿದೆ.

ನಂತರ ಪ್ರಾಧಿಕಾರವು ಈ ಕೆಳಕಂಡ ವಿವಾದಾಂಶಗಳನ್ನು ರಚಿಸಲಾಯಿತು.

1. ದಿನಾಂಕ: 29-03-2006 ರ ಸಂಜೆ 7-30 ಗಂಟೆಯ ಸಮಯದಲ್ಲಿ ಪ್ಯಾಸೆಂಜರ್ ಟೆಂಪೋ (ಮ್ಯಾಕ್ಸಿಕ್ಯಾಬ್) ಸಂ: ಕೆಎ–03-6139 ಎಂಬ ವಾಹನದಲ್ಲಿ ಅಕ್ರಮವಾಗಿ 150 ಲೀಟರ್ ಕಳ್ಳಭಟ್ಟಿ ಸಾರಾಯಿಯನ್ನು ಸಾಗಾಣಿಕೆಯಾಗಿದೆಯೇ? ಹಾಗೂ ವಾಹನ ಮಾಲೀಕನ ಅರಿವಿನಿಂದ ಕೃತ ನಡೆದಿದೆಯೇ?
2. ವಾಹನವು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 32 ಮತ್ತು 34 ರ ಅಡಿಯಲ್ಲಿ ಉಲ್ಲಂಘನೆಯಾಗಿದೆಯೇ?
3. ಜಪ್ತುಪಡಿಸಲಾದ ವಾಹನವನ್ನು ಕಾನೂನಿನಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿದೆಯೇ?
4. ಆದೇಶವೇನು?

ಈ ಮೇಲ್ಕಂಡ ವಿವಾದಾಂಶಗಳಿಗೆ ಉತ್ತರ ಈ ಕೆಳಕಂಡಂತಿರುತ್ತದೆ

1. ಹೌದು.
2. ಹೌದು.
3. ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43(ಎ) ರ ಅಡಿಯಲ್ಲಿ ಅವಕಾಶವಿರುತ್ತದೆ.
4. ಅಂತಿಮ ಆದೇಶದಂತೆ

ನಂತರ ಪ್ರಕರಣದ ವಿಚಾರಣೆಯನ್ನು ನಡೆಸಿ, ಅರ್ಜಿದಾರರ ಪರವಾಗಿ ವಕೀಲರು ಮತ್ತು ಸರ್ಕಾರಿ ಅಭಿಯೋಗ ನಿರ್ದೇಶಕರ ನಡುವೆ ವಾದ ಮತ್ತು ಪ್ರತಿವಾದಗಳನ್ನು ಆಲಿಸಿ, ಈ ಕೆಳಕಂಡ ಸಾಕ್ಷಿಗಳ ವಿಚಾರಣೆ ನಡೆಸಲಾಯಿತು.

**ಪ್ರಾ.ಸಾ–1 :** ಶ್ರೀ ವಿ.ಸುಬ್ರಮಣ್ಯಂ ಬಿನ್ ಏಕಾಂಬರಂ, 56 ವರ್ಷ ವಯಸ್ಸು, ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಮುಳಬಾಗಿಲು ಇವರು ದಿನಾಂಕ: 25-03-2008 ರಂದು ಈ ಪ್ರಾಧಿಕರದ ಮುಂದೆ ಹಾಜರಾಗಿ, ಅಕ್ಟೋಬರ್ 2005 ರಿಂದ 07-09-2007 ರವರೆಗೆ ಆರಕ್ಷಕ ಉಪ ನಿರೀಕ್ಷಕರು, ಅಪರಾದ ವಿಭಾಗ, ಕೋಲಾರ ನಗರ ಠಾಣೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಮಯದಲ್ಲಿ ದಿನಾಂಕ: 29-03-2006 ರಂದು ಸಂಜೆ 7-00 ಗಂಟೆಗೆ ಠಾಣೆಯಲ್ಲಿದ್ದಾಗ ಬಂದ ಮಾಹಿತಿ ಮೇರೆಗೆ ಕೋಲಾರ ಬೈಪಾಸ್ ರಸ್ತೆ ಬೆಸ್ಕಾಂ ಕಛೇರಿ ಬಳಿ ಸಿಬ್ಬಂದಿಯೊಡನೆ ರಸ್ತೆ ಕಾವಲು ಕಾಯುತ್ತಿರುವಾಗ ಸುಮಾರು 7-30 ಗಂಟೆಯ

ಸಮಯದಲ್ಲಿ ನರಸಾಪುರ ಕಡೆಯಿಂದ ಒಂದು ಮ್ಯಾಕ್ಸಿಕ್ಯಾಬ್ ಸಂ: ಕೆಎ–03-6139 (ಪ್ಯಾಸೆಂಜರ್ ಟೆಂಪೋ) ಬಂದಿದ್ದು, ಅದನ್ನು ನಿಲ್ಲಿಸಿ ಶೋಧನೆ ನಡೆಸಿದಾಗ ಸೀಟಿನ ಮಧ್ಯೆ ಮೂರು ಗೋಣಿ ಚೀಲಗಳಲ್ಲಿ ಸುಮಾರು 150 ಲೀಟರ್ ಕಳ್ಳಭಟ್ಟಿ ಸಾರಾಯಿ ಮೂರು ರಬಾರ್ ಟ್ಯೂಬ್‌ಗಳಲ್ಲಿದ್ದು, ಟೆಂಪೋ ಚಾಲಕನನ್ನು ಇದರ ಬಗ್ಗೆ ಕೇಳಲಾಗಿ ಯಾವುದೇ ಪರ್ಮಿಟ್ ವಗೈರೆ ಇಲ್ಲದಿದ್ದು, ಅದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ ಚಾಲಕನ ಹೆಸರು ಕೇಳಲಾಗಿ ಸಿ.ಎನ್.ಚೌಡರೆಡ್ಡಿ ಬಿನ್ ನಾರಾಯಣಪ್ಪ, ನಾಯಂಡ್ರಹಳ್ಳಿ, ಚಿಂತಾಮಣಿ ತಾಲ್ಲೂಕು ಎಂದು ನುಡಿದಿರುತ್ತಾನೆ. ವಾಹನದಲ್ಲಿದ್ದ ಮತ್ತೊಬ್ಬ ಕ್ಲೀನರ್‌ನ ಹೆಸರು ಮಂಜುನಾಥ್ ಬಿನ್ ವೆಂಕಟೇಶಪ್ಪ, ಭೋವಿಹಳ್ಳಿ, ಬಂಗಾರಪೇಟೆ ತಾಲ್ಲೂಕು ಎಂದು ತಿಳಿಸಿರುತ್ತಾರೆ. ವಾಹನ ಮತ್ತು ಮಾಲನ್ನು ಪಂಚನಾಮೆ ಮುಖಾಂತರ ವಶಪಡಿಸಿಕೊಂಡು, ರಾಸಾಯನಿಕ ಪರೀಕ್ಷೆಗಾಗಿ 180 ಮಿಲಿಯ ಮಾದರಿಯನ್ನು ತೆಗೆದು ಸೀಲುನೊಂದಿಗೆ ಮೊಹರು ಮಾಡಲಾಯಿತು.

ನಂತರ ಮಾಲು ಮತ್ತು ಆರೋಪಿಗಳೊಂದಿಗೆ ಠಾಣೆಗೆ ಬಂದು ಮೊಕದ್ದಮೆ ಸಂ: 37/2006 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವರದಿಗಳನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಲಾಯಿತು. ಮಾಲಿನ ಪಟ್ಟಿಯನ್ನು ಪಿ.ಎಫ್.40/2006 ರಲ್ಲಿ ನೋಂದಾಯಿಸಿಕೊಂಡು, ಆರೋಪಿಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿ ಮುಂದಿನ ತನಿಖೆಗಾಗಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಗುಡೇಗೌಡ ರವರಿಗೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದು ಸದರಿ ಪಂಚನಾಮೆಯನ್ನು ನಿಶಾನೆ–1 ಎಂದು ಗುರುತಿಸಲಾಗಿದೆ. ಪಾಟೀ ಸವಾಲು ಇಲ್ಲ.

**ಪ್ರಾ.ಸಾ–2 :** ಶ್ರೀ ರಾಮಚಂದ್ರ ಬಿನ್ ವೆಂಕಟರಾಮಪ್ಪ, ವಯಸ್ಸು 41 ವರ್ಷ, ಕಂಡಕ್ಟರ್, ಹೊಸಕೋಟೆ ಇವರು ದಿನಾಂಕ: 10-09-2009 ಮತ್ತು 25-09-2010 ರ ದಿನಗಳಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ, ಜಪ್ತುಪಡಿಸಿರುವ ವಾಹನ ಶ್ರೀಮತಿ ಸುಗುಣಾ ರವರಿಗೆ ಸೇರಿದ್ದು, ನಾನು ಜಿಪಿಎ ಹೊಂದಿರುತ್ತೇನೆಂದು ತಿಳಿಸಿ, ಸದರಿ ವಾಹನವನ್ನು ಕೋಲಾರ ನಗರ ಟಮಕದ ಹತ್ತಿರ ನಿಲ್ಲಿಸಿ ಪ್ರಯಾಣಿಕರನ್ನು ವಾಹನದಿಂದ ಇಳಿಸುತ್ತಿದ್ದಾಗ ಸಾರಾಯಿ ಗುತ್ತಿಗೆದಾರರ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಬಾಲಪ್ಪ ಎಂಬುವರು ಒಂದು ಚೀಲವನ್ನು ಗಾಡಿಯ ಮುಂದೆ ಇಟ್ಟುಕೊಂಡು ನಿಂತಿದ್ದನು. ಇದೇ ವಾಹನದಲ್ಲಿ ಈ ಮೂಟೆ ಇತ್ತು ಎಂದು ಪೊಲೀಸರಿಗೆ ಮಾಹಿತಿ ನೀಡಿ, ಪೊಲೀಸರನ್ನು ಸ್ಥಳಕ್ಕೆ ಕರೆಯಿಸಿ ಬಲವಂತವಾಗಿ ಸದರಿ ಬಾಲಪ್ಪ ನಮ್ಮ ಮೇಲೆ ಕೇಸು ದಾಖಲು ಮಾಡಿರುತ್ತಾನೆ. ಕೃತ್ಯ ನಡೆದ ದಿವಸ ನಮ್ಮ ಮ್ಯಾಕ್ಸಿಕ್ಯಾಬ್‌ನಲ್ಲಿ ಯಾವುದೇ ಸಾರಾಯಿ ಸಾಗಾಣಿಕೆ ಮಾಡಿರುವುದಿಲ್ಲವೆಂದು ನುಡಿದು ವಾಹನವನ್ನು ಬಿಡುಗಡೆಗೊಳಿಸುವಂತೆ ಕೋರಿರುತ್ತಾನೆ.

**ಪ್ರಾ.ಸಾ–3 :** ಶ್ರೀಮತಿ ಎಂ.ಆರ್.ಸುಮಾ ಕೋಂ ರಮೇಶ್, ವಯಸ್ಸು 31 ವರ್ಷ, ಅಬಕಾರಿ ಉಪ ನಿರೀಕ್ಷಕರು, ಚಿಂತಾಮಣಿ ವಲಯ ರವರು ದಿನಾಂಕ: 26-03-2010 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ, ಕೋಲಾರ ವಲಯದಲ್ಲಿ ಅಬಕಾರಿ ಉಪ ನಿರೀಕ್ಷಕರಾಗಿ ದಿನಾಂಕ: 01-06-2005 ರಿಂದ 02-01-2009 ರವರೆಗೆ ಕೆಲಸ ನಿರ್ವಹಿಸುತ್ತಿರುವುದಾಗಿ ತಿಳಿಸಿ, ಈ ಸಮಯದಲ್ಲಿ ದಿನಾಂಕ: 29-03-2006 ರಂದು ಕೋಲಾರ ನಗರ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಮೊಕದ್ದಮೆ ಸಂ: 37 ರಲ್ಲಿ ನಮೂದಾಗಿರುವ ಪ್ರಕರಣವನ್ನು ಮುಂದಿನ ತನಿಖೆಗಾಗಿ ಕಡತ ಮಾಲನ್ನು ದಿನಾಂಕ: 15-05-2006 ರಂದು ಪಡೆದು, ಈ ವಾಹನ 'ಬಿ' ಎಕ್ಸ್‌ಟ್ರಾಕ್ಟ್‌ನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಇಂದಿರಾ ನಗರ, ಬೆಂಗಳೂರು ಇಲ್ಲಿಗೆ ಸ್ವತಃ ಭೇಟಿನೀಡಿ, 'ಬಿ' ಎಕ್ಸ್‌ಟ್ರಾಕ್ಟ್‌ನ್ನು ಪಡೆದಿರುತ್ತೇನೆ. ಪ್ರಾಧಿಕೃತ ಅಧಿಕಾರಿಗಳು ನೀಡಿದ ಆದೇಶದನ್ವಯ ವಾಹನವನ್ನು ದಿನಾಂಕ: 01-12-2006 ರಂದು ಮಧ್ಯಂತರ ಅವಧಿಗೆ ತಾತ್ಕಾಲಿಕವಾಗಿ ಬಿಡುಗಡೆ ಮಾಡಿರುತ್ತೇನೆ. ನಂತರ ತನಿಖೆಯನ್ನು ಪೂರೈಸಿ ದಿನಾಂಕ: 06-09-2006 ರಂದು ಮಾನ್ಯ ನ್ಯಾಯಾಲಯದಲ್ಲಿ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ವಾಹನವನ್ನು ನೋಡಿದರೆ ಗುರುತಿಸಿರುತ್ತೇನೆ. ಸದರಿ ವಾಹನವು ಈಗಾಗಲೇ ಮುದ್ದೆಮಾಲು–1 ಎಂದು ಗುರುತಿಸಲಾಗಿದೆ. 'ಬಿ' ಎಕ್ಸ್‌ಟ್ರಾಕ್ಟ್ ಪ್ರತಿಯನ್ನು ನೋಡಿ ಗುರುತಿಸಿರುತ್ತಾರೆ ಎಂದು ಪೂರಕ ಸಾಕ್ಷ್ಯ ನುಡಿದಿರುತ್ತಾರೆ.

ಸಾಕ್ಷಿದಾರರನ್ನು ಅರ್ಜಿದಾರರ ಪರ ವಕೀಲರು ಪಾಟೀ ಸವಾಲು ಮಾಡಿದ್ದು ಎಫ್.ಎಸ್.ಎಲ್ ವರದಿಯ ಪ್ರಕಾರ ಕಳ್ಳಭಟ್ಟಿ ಸಾರಾಯಿ ಮಾನವನ ಸೇವೆಗೆ ಯೋಗ್ಯವಿಲ್ಲ ಎಂಬುದು ಸರಿ. ಮಹಜರ್ ಸಾಕ್ಷಿಯನ್ನು ವಿಚಾರಣೆ ಮಾಡಿದ್ದೀರಾ? ಎಂದರೆ ಇಲ್ಲ 2006 ರಲ್ಲಿ ರಾಜ್ಯದಲ್ಲಿ ಸಾರಾಯಿ ನಿಷೇಧ ಆಗಿತ್ತಾ ಅಂದರೆ ಆಗಿರುವುದಿಲ್ಲ, 2006 ರಲ್ಲಿ ಕೋಲಾರಿನಲ್ಲಿ ಸಾರಾಯಿ ಗುತ್ತಿಗೆದಾರರು ಇದ್ದರಾ, ಅವರು ಯಾರು? ಎಂಬುದಕ್ಕೆ ಚಂದ್ರೇಗೌಡ ಎಂದರೆ ಸರಿ, ಸದರಿ ಗುತ್ತಿಗೆದಾರರ ಸಾರಾಯಿ ವಿತರಣಾ ಕೇಂದ್ರ, ಕೊಂಡರಾಜನಹಳ್ಳಿಯಲ್ಲಿ ಇತ್ತು ಎಂದರೆ ಸರಿ, ಹರಿ ಮತ್ತು ಬಾಲಪ್ಪ ಎಂಬುವರು ಸಹರಿ ಗುತ್ತಿಗೆದಾರರ ಹತ್ತಿರ ಕೆಲಸ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲವೆಂದು ನುಡಿದಿರುತ್ತಾರೆ. ಸದರಿಯವರ ಪ್ರೇರಣೆಯಿಂದ ಪೊಲೀಸ್‌ನವರು ಪ್ರಕರಣ ದಾಖಲಿಸಿ ನಂತರ ನೀವು ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಬಾಲಪ್ಪ ಮತ್ತು ಹರಿಯವರ ಪ್ರೇರಣೆ ಮೇರೆಗೆ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಪ್ಯಾಸೆಂಜರ್ ಬಸ್ಸಿನಲ್ಲಿ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆ ಮಾಡಿಲ್ಲ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ. ಪಾಟೀ ಸವಾಲಿನಲ್ಲಿ ಯಾವುದೇ ತದ್ವಿರುದ್ಧ ಸಾಕ್ಷ್ಯವನ್ನು ನುಡಿದಿರುವುದಿಲ್ಲ.

ಸದರಿ ಪ್ರಕರಣದಲ್ಲಿ ಅರ್ಜಿದಾರರ ಪರ ವಕೀಲರು ಪಾಟೀ ಸವಾಲಿನಲ್ಲಿ ಕಲಂ 32, 34 ಕ್ಕೆ ಸಂಬಂಧಿಸಿದಂತೆ, ಪಾಟೀ ಸವಾಲು ಮಾಡಿರುತ್ತಾರೆಯೇ ವಿನಹ ಪ್ರಮುಖವಾಗಿ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 43(ಎ) ರಂತೆ ಕೃತ್ಯದ ಬಗ್ಗೆ ಅರ್ಜಿದಾರರಿಗೆ ಮಾಹಿತಿ ಇತ್ತೆ ಅಥವಾ ಇಲ್ಲವೇ ಎಂಬುದರ ಬಗ್ಗೆ ಪಾಟೀ ಸವಾಲು ಮಾಡಿರುವುದಿಲ್ಲ. ಆದ್ದರಿಂದ ಪ್ರಾ.ಸಾ–1 ಮತ್ತು 2 ರ ಸಾಕ್ಷ್ಯವನ್ನು ಸಂಶಯಾಸ್ಪದದಿಂದ ನೋಡುವುದಕ್ಕೆ ಯಾವುದೇ ದೃಢವಾದ ಸ್ಪಷ್ಟ ಕಾರಣಗಳು ಅರ್ಜಿದಾರರು ತೋರಿಸದೇ ಇದ್ದುದರಿಂದ ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಲಾಗಿದೆ.

ದಿನಾಂಕ: 24-12-2010 ರಂದು ಅರ್ಜಿದಾರರು ಹಾಗೂ ಜಿ.ಪಿ.ಎ ಹೊಂದಿರುವ ವಿ.ರಾಮಚಂದ್ರ ಎಂಬುವರು, ಈ ಪ್ರಾಧಿಕಾರಕ್ಕೆ ಒಂದು ಅರ್ಜಿ ಸಲ್ಲಿಸಿ ಫಿರ್ಯಾದುದಾರರಾದ ಎ.ಸುಬ್ರಮಣಿ, ಆರಕ್ಷಕ ಉಪ ನಿರೀಕ್ಷಕರು (ಪಿಡಬ್ಲ್ಯು–1) ರವರ ಸಾಕ್ಷ್ಯವನ್ನು ಪೂರ್ತಿ ವಿಚಾರಣೆ ಮಾಡಿರುವುದಿಲ್ಲ ಅಥವಾ ಪ್ರಕರಣ ದಾಖಲಿಸಿರುವ ಬಗ್ಗೆ ದಾಖಲೆಗಳ ಸಾಕ್ಷ್ಯ ಮತ್ತು ಮಹಜರ್ ಹಾಜರುಪಡಿಸಿರುವುದಿಲ್ಲ. ಈ ಅಪೂರ್ಣ ಸಾಕ್ಷ್ಯದಿಂದ ಈ ಆರೋಪವು ರುಜುವಾತು ಪಡಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಜಿ.ಪಿ.ಎ ಹೊಂದಿರುವ ವಿ.ರಾಮಚಂದ್ರ (ಪಿಡಬ್ಲ್ಯು–2) ರವರು ನುಡಿದ ಸಾಕ್ಷ್ಯದಲ್ಲಿ ಕೃತ್ಯ ನಡೆದ ದಿವಸ ವಾಹನದಲ್ಲಿ ಯಾವುದೇ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆ ಮಾಡಿರುವುದಿಲ್ಲ, ಇದು ಸುಳ್ಳು ಮೊಕದ್ದಮೆ ಎಂದು ಲಿಖಿತ ವಾದ ಮಂಡಿಸಿರುತ್ತಾರೆ.

ಮೂರನೆಯದಾಗಿ, ಶ್ರೀಮತಿ ಎಂ.ಆರ್.ಸುಮಾ (ಪಿಡಬ್ಲ್ಯು–3) ಅಬಕಾರಿ ಉಪ ನಿರೀಕ್ಷಕರು ರವರು 'ಬಿ' ಎಕ್ಸ್ಟ್ರ್ಯಾಕ್ಟ್ ಸಂಬಂಧಪಟ್ಟ ಆರ್.ಟಿ.ಓ ರವರಿಂದ ಪಡೆದು, ಹಿರಿಯ ಅಧಿಕಾರಿಗಳ ಆದೇಶದಂತೆ ಜಪ್ತುಪಡಿಸಿರುವ ಕಳ್ಳಭಟ್ಟಿ ಸಾರಾಯಿಯನ್ನು ನಾಶಪಡಿಸಿ, ತನಿಖೆಯ ನಂತರ ದೋಷಾರೋಪಣ

ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆಯೇ ವಿನಹ ಯಾವುದೇ ಬಲವಾದ ಸಾಕ್ಷ್ಯವನ್ನು ನುಡಿಯದ ಕಾರಣ ಈ ಆರೋಪ ರುಜುವಾತು ಪಡಿಸಲು ಉತ್ತೇಜನ ನೀಡಿರುವುದಿಲ್ಲ.

ಕೊನೆಯದಾಗಿ, ಮಹಜರ್ ಸಾಕ್ಷಿದಾರರಾದ ಟಿ.ಎನ್.ಬಾಲಪ್ಪ ಮತ್ತು ಇ.ಹರಿ ರವರ ವಿಚಾರಣೆ ನಡೆಸಿರುವುದಿಲ್ಲವಾದ್ದರಿಂದ ಪೊಲೀಸ್‌ನವರು ವಾಹನ ಜಫ್ತುಪಡಿಸಿರುವುದು ರುಜುವಾತಾಗಿರದ ಕಾರಣ ಮುಟ್ಟುಗೋಲು ನಡವಳಿಯನ್ನು ಕೈಬಿಟ್ಟು ವಾಹನ ಮತ್ತು ಭದ್ರತೆಗಾಗಿ ನೀಡಿರುವ ದಾಖಲೆಗಳನ್ನು ವಾಪಸ್ಸು ಕೊಡುವಂತೆ ಕೋರಿರುತ್ತಾರೆ.

ಈ ಪ್ರಕರಣದಲ್ಲಿ ದೊರೆತ ಎಲ್ಲಾ ಸಾಕ್ಷ್ಯದಾರಗಳು, ಪ್ರಾಪಂಚಿಕ ಸಾಕ್ಷ್ಯ, ವಸ್ತುಸ್ಥಿಯನ್ನು ಪರಿಶೀಲಿಸಲಾಗಿ ಫಿರ್ಯಾದುದಾರರಾದ ಶ್ರೀ ಎ.ಸುಬ್ರಮಣಿ ಮತ್ತು ತನಿಕಾಧಿಕಾರಿಗಳಾದ ಶ್ರೀಮತಿ ಎಂ.ಆರ್.ಸುಮಾ ರವರು ಜಫ್ತುಪಡಿಸಿದ ಕಳ್ಳಭಟ್ಟಿ ಸಾರಾಯಿಯನ್ನು ರಾಸಾಯನಿಕ ಪರೀಕ್ಷೆಗೊಳಪಡಿಸಿ ಮಾನವನ ಸೇವನೆಗೆ ಯೋಗ್ಯವಲ್ಲವೆಂದು ರಾಸಾಯನಿಕ ತಜ್ಞರ ಅಭಿಪ್ರಾಯ ಪಡೆದಿರುತ್ತಾರೆ. ಈ ಸಾಕ್ಷಿಗಳು ಪ್ರಮುಖ ಸಾಕ್ಷ್ಯದಾರರಾಗಿ ಸಾಕ್ಷ್ಯ ನುಡಿದಿರುವುದು ಅಲ್ಲಗೆಳೆಯುವಂತದಲ್ಲ.

ಕಾರ್ಯದರ್ಶಿ ಕೊಂಡರಾಜನಹಳ್ಳಿ ಗ್ರಾಮ ಪಂಚಾಯ್ತಿ, ಕೋಲಾರ ತಾಲ್ಲೂಕು ರವರು ದಿನಾಂಕ: 13-11-2009 ರಂದು ನೀಡಿರುವ ದೃಢೀಕರಣ ಪತ್ರದಂತೆ, ಕೊಂಡರಾಜನಹಳ್ಳಿ ಗ್ರಾಮದ ವಾಸಿ ಶ್ರೀ ಇ.ಹರಿ ಎಂಬ ಮಹಜರ್ ಸಾಕ್ಷಿದಾರರು ಸದರಿ ಗ್ರಾಮದಲ್ಲಿ ವಾಸವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ ಹಾಗೂ ಶ್ರೀ ಟಿ.ಎಸ್.ಬಾಲಪ್ಪ ಎಂಬ ಮಹಜರ್ ಸಾಕ್ಷಿಯೂ ಸಹ ಸುಮಾರು ಎರಡು ವರ್ಷಗಳ ಹಿಂದೆ ಅಪಘಾತದಲ್ಲಿ ಸತ್ತಿರುತ್ತಾರೆ. ಆದ್ದರಿಂದ ಇವರ ಸಾಕ್ಷ್ಯ ಪಡೆಯಲು ಸಾಧ್ಯವಾಗಿರುವುದಿಲ್ಲ.

ವಾಹನದ ಮಾಲೀಕರಾದ ಶ್ರೀಮತಿ ಸುಗುಣಾ ರವರು ಈ ಪ್ರಾಧಿಕಾರದಿಂದ ನೀಡಿರುವ ಕಾರಣ ಕೇಳಿ ನೋಟೀಸ್‌ಗೆ ದಿನಾಂಕ: 07-07-2006 ರ ಹೇಳಿಕೆಯಲ್ಲಿ, ವಾಹನದಲ್ಲಿ ಹೊಸಕೋಟೆಯಿಂದ ಪ್ರಯಾಣಿಕರನ್ನು ಹತ್ತಿಸಿಕೊಂಡು ಬರುತ್ತಿರುವಾಗ ಮಾರ್ಗ ಮಧ್ಯೆದಲ್ಲಿರುವ ತಾವರೆಕೆರೆ ಗ್ರಾಮದಲ್ಲಿ ಒಬ್ಬ ಪ್ರಯಾಣಿಕನು ಹೂವುಗಳನ್ನು ಖರೀದಿಸಲು ನಿಲ್ಲಿಸಿದಾಗ, ಚಾಲಕನಿಗೆ ಮತ್ತು ಕ್ಲೀನರಿಗೆ ಗೊತ್ತಿಲ್ಲದೆ ಶ್ರೀ ಟಿ.ಎಂ.ಬಾಲಪ್ಪ ಎಂಬುವರು ಕಳ್ಳಭಟ್ಟಿ ಸಾರಾಯಿ ಇರುವ ಒಂದು ಗೋಣಿ ಚೀಲವನ್ನು ವಾಹನ ಮೇಲೆ ಎಸೆದನೆಂದು ಬರವಣಿಗೆಯಲ್ಲಿ ತಿಳಿಸಿರುತ್ತಾಳೆ. ವಾಹನದಲ್ಲಿ ಚಾಲಕ, ಕಂಡಕ್ಟರ್ ಮತ್ತು ಕ್ಲೀನರ್ ಎಂಬ ಮೂರು ಜನರಿದ್ದು ಇವರಿಗೆ ತಿಳಿಯದೆ ಮನಸೋ ಇಚ್ಛೆ ಯಾರೋ ಒಬ್ಬ ಅಪರಿಚಿತ ವ್ಯಕ್ತಿ ನಿಷೇಧಿತ ಕಳ್ಳಭಟ್ಟಿ ಸಾರಾಯಿಯ ಚೀಲವನ್ನು ಎಸೆಯಲು ಸಾಧ್ಯವಿಲ್ಲ. ಆದ್ದರಿಂದ ಕಳ್ಳಭಟ್ಟಿ ಸಾರಾಯಿ ಈ ವಾಹನದಲ್ಲಿ ತನ್ನ ಸ್ವಂತ ಲಾಭಕ್ಕೋಸ್ಕರ ಸಾಗಾಣಿಕೆ ಮಾಡಿರುವುದು ಸ್ಪಷ್ಟವಾಗಿ ದೃಢಪಟ್ಟಿರುತ್ತದೆ.

ಇದೂ ಅಲ್ಲದೆ, ಶ್ರೀ ಹೆಚ್.ಶಂಕರ್, ವಕೀಲರು ಸಲ್ಲಿಸಿರುವ ಪತ್ರದಲ್ಲಿ ವಾಹನ ಬಿಡುಗಡೆಗೆ ರೂ.10,000/- ಗಳು ಕೇಳಿದ ಇದನ್ನು ಅವರ ಸ್ನೇಹಿತನಿಗೆ ದೂರವಾಣಿ ಕರೆ ಮಾಡಿ ರೂ.6,000/- ತರಿಸಿಕೊಂಡು ನೀಡಿರುತ್ತಾನೆ ಎಂದು, ಆದರೆ ವಾಹನ ಮಾಲೀಕರು ನೀಡಿರುವ ಪತ್ರದಲ್ಲಿ ವಾಹನ ಬಿಡುಗಡೆಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ರೂ.20,000/- ಗಳು ಕೊಡುವಂತೆ ಕೇಳಿದ, ಜಿ.ಪಿ.ಎ ಹೊಂದಿರುವರು ಅವರ ಸ್ನೇಹಿತರ ಮುಖಾಂತರ ಬಂಗಾರದ ಆಭರಣಗಳನ್ನು ಗಿರಿವಿ ಇಟ್ಟು ರೂ.10,000/- ಗಳನ್ನು ನೀಡಿರುತ್ತೇವೆ ಎಂದು ತಿಳಿಸಿರುತ್ತಾರೆ. ಈ ವ್ಯತ್ಯಾಸದ ಲಿಖಿತ ಹೇಳಿಕೆಗಳಿಂದ, ಅರ್ಜಿದಾರರು, ವಾಹನ ಮಾಲೀಕರು ಮತ್ತು ವಾಹನದಲ್ಲಿ ಪ್ರಯಾಣಿಸಿದ ಶ್ರೀ ಹೆಚ್.ಶಂಕರ್ ರವರು ಅವರ ವಾದವನ್ನು ಸಮರ್ಥಿಸಿಕೊಳ್ಳಲು ನೀಡಿರುವ ಹೇಳಿಕೆಗಳು ಶುದ್ಧ ಸುಳ್ಳೆಂದು ಸಾಬೀತಾಗಿರುತ್ತದೆ.

ಪಿಡಬ್ಲ್ಯು–2 ಸಾಕ್ಷಿದಾರರಾದ ಶ್ರೀ ವಿ.ರಾಮಚಂದ್ರ ಎಂಬುವರು ನುಡಿದಿರುವ ಸಾಕ್ಷ್ಯದಲ್ಲಿ ವಾಹನವನ್ನು ಕೋಲಾರ ನಗರ ಟಮಕದ ಹತ್ತಿರ ನಿಲ್ಲಿಸಿ ಪ್ರಯಾಣಿಕರನ್ನು ಇಳಿಸುತ್ತಿದ್ದಾಗ ಬಾಲಪ್ಪ ಎಂಬುವರು ಕಳ್ಳಭಟ್ಟಿ ಸಾರಾಯಿ ಇರುವ ಒಂದು ಚೀಲವನ್ನು ಗಾಡಿಯ ಮುಂದೆ ಇಟ್ಟುಕೊಂಡು ನಿಂತಿದ್ದರು, ನಂತರ ಇದೇ ವಾಹನದಲ್ಲಿ ಮೂಟೆ ಇತ್ತು ಎಂದು ಪೊಲೀಸರಿಗೆ ಫೋನ್ ಮೂಲಕ ತಿಳಿಸಿ ಮೊಕದ್ದಮೆ ದಾಖಲಿಸಲು ಅನುವು ಮಾಡಿಕೊಟ್ಟಿರುತ್ತಾನೆ ಎಂದು ಹೇಳಿರುತ್ತಾನೆ. ಆದರೆ ನಿಜವಾಗಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಕೋಲಾರ ಹೊರ ವಲಯದ ಬೆಸ್ಕಾಂ ಕಛೇರಿಯ ಬಳಿ ಮೊಕದ್ದಮೆ ದಾಖಲಿಸಿರುತ್ತಾರೆ. ಆದ್ದರಿಂದ ವಿ.ರಾಮಚಂದ್ರ ನೀಡಿರುವ ಸಾಕ್ಷ್ಯ ಸುಳ್ಳೆಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ.

ವಾಹನ ಮಾಲೀಕರಿಗೆ ಹಾಗೂ ಜಿ.ಪಿ.ಎ ಹೊಂದಿರುವವರಿಗೆ ಅನೇಕ ಬಾರಿ ವಿಚಾರಣೆ ನೋಟೀಸ್‌ನಲ್ಲಿ ವಾಹನವನ್ನು ಈ ಪ್ರಾಧಿಕಾರದ ಮುಂದೆ ಹಾಜರುಪಡಿಸಲು ತಿಳಿಸಿದ್ದರೂ ಒಂದುಸಾರಿಯು ಹಾಜರುಪಡಿಸದೇ ವಿಧಿಸಿರುವ ಷರತ್ತನ್ನು ಉಲ್ಲಂಘಿಸಿರುತ್ತಾರೆ.

ವಾಹನ ಮಾಲೀಕರು ತನ್ನ ಲಿಖಿತ ಹೇಳಿಕೆಯಲ್ಲಿ ಕಳ್ಳಭಟ್ಟಿ ಸಾರಾಯಿ ವಾಹನದಲ್ಲಿ ಸಾಗಾಣಿಕೆ ಮಾಡಿರುವುದು ನಿಜವೆಂದು ಅದು ಅವರಿಗೆ ಮಾಹಿತಿ ಇತ್ತೆಂದು ಸ್ವತಃ ತಿಳಿಸಿರುವುದರಿಂದ ಸಾಕ್ಷಿಗಳನ್ನು ವಿಚಾರಣೆಗೊಳಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ ಪ್ರಕರಣದಲ್ಲಿ ಪ್ರಾ.ಸಾ–1 ಮತ್ತು 3 ಇವರು ಪೂರಕವಾಗಿ ಹೊಂದಾಣಿಕೆಯಾಗುವಂತೆ ಸಾಕ್ಷ್ಯ ನುಡಿದಿದ್ದರಿಂದ ಮತ್ತು ಪ್ರಾ.ಸಾ–2 ಇವರು ಸದರಿ ಕೃತ್ಯದ ಬಗ್ಗೆ ಮಾಹಿತಿ ಇಲ್ಲವೆಂಬುದನ್ನು ರುಜುವಾತು ಪಡಿಸಲು ವಿಫಲರಾಗಿರುತ್ತಾರೆ ಹಾಗೂ ವಾಹನದಲ್ಲಿ ಕಳ್ಳಭಟ್ಟಿ ಸಾರಾಯಿ ಅಕ್ರಮವಾಗಿ ಸಾಗಾಣಿಕೆಯಾಗಿದೆ ಎಂದು ಬರವಣಿಗೆ ಮೂಲಕ ತಿಳಿಸಿರುತ್ತಾರೆ. ಆದ್ದರಿಂದ ಈ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಸರ್ವ ವಿಧದಲ್ಲೂ ಯೋಗ್ಯವಾಗಿರುತ್ತದೆ ಎಂದು ಪರಿಗಣಿಸಿ ಈ ಕೆಳಕಂಡ ಆದೇಶ.

## ಆದೇಶ

ಟಿ.ಆರ್.ಜಯಸಿಂಹ, ಪ್ರಾಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಉಪ ಆಯುಕ್ತರು, ಕೋಲಾರ ಜಿಲ್ಲೆ, ಕೋಲಾರ ಜಿಲ್ಲೆ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43(ಬಿ) ಅಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿ, ಕಲಂ 43(ಎ) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಅಪರಾಧ ವಿಭಾಗ, ಕೋಲಾರ ನಗರ ಪೊಲೀಸ್ ಠಾಣೆ, ಕೋಲಾರ ರವರ ಪ್ರವವ ಸಂ: 37, ದಿನಾಂಕ: 29-03-2006 ರಲ್ಲಿ ಜಫ್ತುಪಡಿಸಲಾದ ಮ್ಯಾಕ್ಸಿಕ್ಯಾಬ್ (ಪ್ಯಾಸೆಂಜರ್ ಟೆಂಪೋ) ಸಂ: ಕೆಎ–03-6139 ಅನ್ನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43(ಎ)(2) ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಈ ಪ್ರಾಧಿಕಾರದಿಂದ ದಿನಾಂಕ: 23-11-2006 ರಂದು ವಾಹನವನ್ನು ತಾತ್ಕಾಲಿಕವಾಗಿ ಮಧ್ಯಂತರ ಬಿಡುಗಡೆಗೆ ಹೊರಡಿಸಿರುವ ಆದೇಶವನ್ನು ರದ್ದುಗೊಳಿಸಿದೆ. ವಾಹನದ ನೋಂದಣಿ ಮಾಲೀಕರು (R.C. Owner) ಸದರಿ ಮಧ್ಯಂತರ ಅವಧಿಗೆ ಬಿಡುಗಡೆ ಹೊಂದಿರುವ ಮ್ಯಾಕ್ಸಿಕ್ಯಾಬ್ (ಪ್ಯಾಸೆಂಜರ್ ಟೆಂಪೋ) ಸಂ: ಕೆಎ–03-6139 ಅನ್ನು ಈ ಆದೇಶದ 30 ದಿವಸಗಳೊಳಗಾಗಿ ಈ ಪ್ರಾಧಿಕಾರದ ಅಂದರೆ ಅಬಕಾರಿ ನಿರೀಕ್ಷಕರು, ಕೋಲಾರ ವಲಯ, ಕೋಲಾರ ರವರ ವಶಕ್ಕೆ ಒಪ್ಪಿಸಲು ಆದೇಶಿಸಿದೆ. ತಪ್ಪಿದ್ದಲ್ಲಿ ಭದ್ರತೆಗಾಗಿ ನೀಡಿರುವ ರೂ.1,30,000/- ಗಳ ಇಂಡಿಮ್ನಿಟಿ ಬಾಂಡ್ ಮತ್ತು ಜಾಮೀನನ್ನು ಇನ್‌ವೋಕ್ ಮಾಡಿ ಅದರ ಮೌಲ್ಯದ ಮೊತ್ತವನ್ನು ಪಡೆದು ಸರ್ಕಾರಕ್ಕೆ ಜಮಾ ಮಾಡಲಾಗುವುದು.

ಈ ಆದೇಶವನ್ನು ಉಕ್ತಲೇಖನ ನೀಡಿ ಗಣಕ ಯಂತ್ರದಲ್ಲಿ ಅಳವಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 31-12-2010 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

**ಟಿ.ಆರ್.ಜಯಸಿಂಹ,**
ಪ್ರಾಧಿಕೃತ ಅಧಿಕಾರಿಗಳು ಹಾಗೂ
ಅಬಕಾರಿ ಉಪ ಆಯುಕ್ತರು,
ಕೋಲಾರ ಜಿಲ್ಲೆ, ಕೋಲಾರ.

ಪಿಆರ್–1795

**ಪ್ರಾಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ಕೋಲಾರ ಜಿಲ್ಲೆ, ಕೋಲಾರ ಇವರ ನ್ಯಾಯಾಲಯದಲ್ಲಿ**

**ಪ್ರಕರಣ ಸಂಖ್ಯೆ: ಇಎಕ್ಸ್‌ಇ/18/ಡಿಟಿಸಿಆರ್/172/2007-08 ದಿನಾಂಕ: 24-12-2010**

**ಫಿರ್ಯಾದುದಾರರು**
ಸಹಾಯಕ ಆರಕ್ಷಕ ಉಪ ನಿರೀಕ್ಷಕರು ಕೋಲಾರ ನಗರ ಪೊಲೀಸ್ ಠಾಣೆ, ಕೋಲಾರ.

**ವಿರುದ್ಧ**

**ಆರೋಪಿಗಳು**
ಇಲ್ಲ

**ಅರ್ಜಿದಾರರು**
ಶ್ರೀ ಎಂ.ರಾಮಮೂರ್ತಿ ಬಿನ್ ಮೋಟಪ್ಪ, ನಂ–80, ಡಿ.ರಾಜಗೋಪಾಲ್ ರಸ್ತೆ, ಆರ್.ಎಂ.ವಿ 2 ನೇ ಸ್ಟೇಜ್, ಸಂಜಯನಗರ, ಬೆಂಗಳೂರು–94.

**ಪ್ರಕರಣದ ಮುಖ್ಯಾಂಶಗಳು:–**

ಕೋಲಾರ ನಗರ ಪೊಲೀಸ್ ಠಾಣೆ, ಸಹಾಯಕ ಆರಕ್ಷಕ ಉಪ ನಿರೀಕ್ಷಕರು ತಮ್ಮ ಸಿಬ್ಬಂದಿಯೊಂದಿಗೆ ದಿನಾಂಕ: 26-09-2007 ರ ರಾತ್ರಿ ಕೋಲಾರ ನಗರ ಆರ್.ಟಿ.ಓ ಕಛೇರಿಯ ಮುಂಭಾಗದಲ್ಲಿ ಗಸ್ತು ಮಾಡುತ್ತಿರಲು ಬಂಗಾರಪೇಟೆ ಕಡೆಯಿಂದ ಅಂದು ರಾತ್ರಿ 2-00 ಗಂಟೆಯ ಸಮಯದಲ್ಲಿ (ಅಂದರೆ ದಿನಾಂಕ: 27-09-2007 ರ ಬೆಳಿಗ್ಗೆ 2-00 ಗಂಟೆ) ಒಂದು ಮಾರುತಿ ಓಮ್ನಿ (ವ್ಯಾನ್) ಬರುತ್ತಿದ್ದು, ಅದನ್ನು ನಿಲ್ಲಿಸಲು ಸೂಚಿಸಲಾಗಿ, ವಾಹನದಲ್ಲಿದ್ದ, ಚಾಲಕ ಮತ್ತು ಇತರೆ ಮೂರು ಜನ ಸಮವಸ್ತ್ರದಲ್ಲಿದ್ದ ಪೊಲೀಸ್ ಸಿಬ್ಬಂದಿಯನ್ನು ನೋಡಿ ವಾಹನವನ್ನು ನಿಲ್ಲಿಸಿ ಕತ್ತಲಲ್ಲಿ ಓಡಿ ಹೋಗಿ ತಪ್ಪಿಸಿಕೊಂಡಿರುತ್ತಾರೆ. ವಾಹನವನ್ನು ಆಜಮಾಯಿಷಿ ಮಾಡಲಾಗಿ ಹಿಂದಿನ ಸೀಟಿನ ಮೇಲೆ ಎರಡು ರಟ್ಟಿನ ಪೆಟ್ಟಿಗೆಗಳಿದ್ದು, ಒಂದೊಂದರಲ್ಲಿ 180 ಮಿಲಿಯ 48 ಬಾಟಲುಗಳಂತೆ ಒಟ್ಟು 96 ಒನ್ ಯುಪಿ ವಿಸ್ಕಿ (1 UP whisky) ಬಾಟಲುಗಳಿರುತ್ತವೆ. ವಾಹನವನ್ನು ಪರಿಶೀಲಿಸಲಾಗಿ ಸಿಲ್ವರ್ ಬಣ್ಣದ ವಾಹನವಾಗಿದ್ದು, ಅದರ ನೋಂದಣಿ ಸಂ: ಕೆಎ–04 ಎಂಸಿ–8258 ಆಗಿರುತ್ತದೆ. ಸದರಿ ವಾಹನದಲ್ಲಿ ಯಾವುದೇ ಪರವಾನಗಿ ಇಲ್ಲದೆ ಕಾನೂನು ಬಾಹಿರವಾಗಿ ಮದ್ಯ ಸಾಗಾಣಿಕೆ ಮಾಡುತ್ತಿರುವುದಾಗಿ ಪರಿಗಣಿಸಿ ವಾಹನ ಮತ್ತು ಮದ್ಯವನ್ನು ಸ್ಥಳ ಪಂಚನಾಮೆ ಕ್ರಮ ಜರುಗಿಸಿ ವಶಕ್ಕೆ ತೆಗೆದುಕೊಂಡು, ದಿನಾಂಕ: 27-09-2007 ರಂದು ಬೆಳಿಗ್ಗೆ 3-15 ಗಂಟೆಗೆ ಮಹಜರ್‌ನೊಂದಿಗೆ ಠಾಣೆಗೆ ಬಂದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 32, 34 ರ ಅಡಿಯಲ್ಲಿ ಪ್ರವವ ಸಂ: 86/2007 ಮೊಕದ್ದಮೆ ದಾಖಲು ಮಾಡಿರುತ್ತೆ.

ದಿನಾಂಕ: 27-09-2007 ರಂದು ಮಾದರಿಗಳು ಮತ್ತು ಜಪ್ತುಪಡಿಸಿದ ಮಾಲನ್ನು ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ, ಕೋಲಾರ ತಾಲ್ಲೂಕು ರವರ ವಶಕ್ಕೆ ಮುಂದಿನ ಕ್ರಮಕ್ಕಾಗಿ ನೀಡಲು ಅಂದಿನ ಪ್ರಾಧಿಕೃತ ಅಧಿಕಾರಿಗಳು ಹಗೂ ಅಬಕಾರಿ ಅಧೀಕ್ಷಕರು, ಕೋಲಾರ ಜಿಲ್ಲೆ, ಕೋಲಾರ ರವರಿಂದ Cr.PC ನಿಯಮ 457 ರ ಅಡಿಯಲ್ಲಿ ಮಾಲು ಪಟ್ಟಿಯನ್ನು (PF) ಹಾಜರುಪಡಿಸಿ ಅನುಮತಿ ಪಡೆದಿರುತ್ತಾರೆ.

ವಾಹನ ಮಾಲೀಕರಾದ ಶ್ರೀ ಎಂ.ರಾಮಮೂರ್ತಿ ಬಿನ್ ಮೋಟಪ್ಪ, ಗೆದ್ದಲಹಳ್ಳಿ, ಸಂಜಯನಗರ, ಬೆಂಗಳೂರು ಇವರು ದಿನಾಂಕ: 08-10-2007 ರಂದು ಈ ಪ್ರಾಧಿಕಾರಕ್ಕೆ ಒಂದು ಅರ್ಜಿ ಸಲ್ಲಿಸಿ, ಈ ಪ್ರಕರಣದ ಕೃತ್ಯವು ನನ್ನ ಗಮನಕ್ಕೆ ಬಾರದೆ ಇದ್ದು ಇದಕ್ಕೂ ನನಗೂ ಯಾವ ಸಂಬಂಧವಿಲ್ಲವೆಂದು ತಿಳಿಸಿ, ಈ ವಾಹನದಿಂದ ನನ್ನ ಜೀವನೋಪಾಯ ನಡೆಯುತ್ತಿದ್ದು, ಇದನ್ನು ತೆರೆದ ಆವರಣದಲ್ಲಿ ನಿಲ್ಲಿಸಿದ್ದು, ಮಳೆ–ಬಿಸಿಲಿಗೆ ವಾಹನವು ದಕ್ಕೆಯಾಗುವ ಸಂಭವವಿರುವುದರಿಂದ, ವಿಧಿಸುವ ಎಲ್ಲಾ ಷರತ್ತುಗಳನ್ನು ಪಾಲಿಸುವುದಾಗಿ ತಿಳಿಸಿ, ವಾಹನವನ್ನು ತಾತ್ಕಾಲಿಕವಾಗಿ ಮಧ್ಯಂತರ ಅವಧಿಗೆ ಬಿಡುಗಡೆ (Interim Custody) ಮಾಡುವಂತೆ ಮನವಿ ಮಾಡಿಕೊಂಡಿರುತ್ತಾನೆ. ಇವರ ಮನವಿಯನ್ನು ಪರಿಗಣಿಸಿ ಸಾರಿಗೆ ಅಧಿಕಾರಿಗಳ ಅಭಿಪ್ರಾಯದಂತೆ 70000/- (ಎಪ್ಪತ್ತು ಸಾವಿರ) ರೂಪಾಯಿಗಳ ಬ್ಯಾಂಕ್ ಗ್ಯಾರಂಟಿ ಮತ್ತು ಇತರೆ ಷರತ್ತುಗಳನ್ನು ವಿಧಿಸಿ ಈ ಪ್ರಾಧಿಕಾರದ ಆದೇಶದ ಸಮ ಸಂಖ್ಯೆ ದಿನಾಂಕ: 16-10-2007 ರಲ್ಲಿ ತಾತ್ಕಾಲಿಕವಾಗಿ ಅರ್ಜಿದಾರರ ಸುಪರ್ದಿಗೆ ಬಿಡುಗಡೆ ಮಾಡಲು ಆದೇಶ ನೀಡಲಾಗಿದೆ. ಇದರಂತೆ, 70000/- ರೂಪಾಯಿಗಳ ಬ್ಯಾಂಕ್ ಗ್ಯಾರಂಟಿಯನ್ನು ಕೆನರಾ ಬ್ಯಾಂಕ್, ಸಂಜಯನಗರ, ಬೆಂಗಳೂರು ರವರಿಂದ ಬಿ.ಜಿ ಸಂ–3/2007 ದಿನಾಂಕ: 18-10-2007 ರಂದು ಪಡೆದು ಈ ಪ್ರಾಧಿಕಾರಕ್ಕೆ ಸಲ್ಲಿಸಿ ವಾಹನವನ್ನು ಅರ್ಜಿದಾರರ ಸುಪರ್ದಿಗೆ ತಾತ್ಕಾಲಿಕವಾಗಿ ಮಧ್ಯಂತರ ಅವಧಿಗೆ ಬಿಡುಗಡೆಗೊಳಿಸಿಕೊಂಡಿರುತ್ತಾರೆ.

ನಂತರ, ವಾಹನವು ಅಕ್ರಮವಾಗಿ ಮದ್ಯ ಸಾಗಾಣಿಕೆಯಲ್ಲಿ ತೊಡಗಿರುವುದರಿಂದ ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43(ಎ) ರ ಅಡಿಯಲ್ಲಿ ಏಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬುದಕ್ಕೆ ಕಲಂ 43(ಬಿ) ರ ಅಡಿಯಲ್ಲಿ ಕಾರಣ ಕೇಳಿ ನೋಟೀಸ್ ದಿನಾಂಕ: 07-11-2007 ರಂದು ನೀಡಿ ತಲುಪಿದ 7 ದಿವಸದೊಳಗೆ ಹೇಳಿಕೆ ನೀಡುವಂತೆ ಆದೇಶಿಸಲಾಗಿತ್ತು.ಅದರಂತೆ ದಿನಾಂಕ: 20-11-2007 ರಂದು ಹೇಳಿಕೆ ನೀಡಿ

ವಾಹನ ಚಾಲಕ ಮತ್ತು ಆತನ ಸ್ನೇಹಿತರು ಕುಡಿಯಲು ಬಿಲ್ಲು ಮುಖಾಂತರ ಖರೀದಿಸಿದ ಮದ್ಯವಾಗಿದ್ದು ಇದು ಅಕ್ರಮ ಸಾಗಾಣಿಕೆಯಾಗಲಿ ಅಥವಾ ಕಾನೂನು ಬಾಹಿರ ಕೃತ್ಯವಾಗಿರುವುದಿಲ್ಲವೆಂದು ತಿಳಿಸಿ ವಿಚಾರಣೆ ಕೈಬಿಟ್ಟು ವಾಹನ ಮತ್ತು ಬ್ಯಾಂಕ್ ಗ್ಯಾರಂಟಿಯನ್ನು ಬಿಡುಗಡೆ ಮಾಡಲು ಮನವಿ ಮಾಡಿಕೊಂಡಿರುತ್ತಾನೆ.

ಅಬಕಾರಿ ಉಪ ನಿರೀಕ್ಷಕರು–II, ಜಾರಿ ಮತ್ತು ತನಿಖೆ, ಕೋಲಾರ ತಾಲ್ಲೂಕು, ಕೋಲಾರ ರವರ ಪತ್ರದ ದಿನಾಂಕ: 07-12-2007 ರಲ್ಲಿ ಮದ್ಯದ ಮಾದರಿಯನ್ನು ರಾಸಾಯನಿಕ ಪರೀಕ್ಷೆಗೊಳಪಡಿಸಲಾಗಿ ರಾಸಾಯನಿಕ ತಜ್ಞರ ವರದಿ ಸಂ: ಸಿಸಿಎಲ್/4093/2007 ದಿ: 30-10-2007 ರಂತೆ ಮದ್ಯದ ಜೋರು $25.6^0$ ಯು.ಪಿ ಇದ್ದು ಇದು ಮಾನವನ ಸೇವನೆಗೆ ಯೋಗ್ಯವಾಗಿರುತ್ತದೆ ಎಂದು ವರದಿಸಿ, ಜಪ್ತುಪಡಿಸಿರುವ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಿಯಮಾನುಸಾರ ನಾಶಮಾಡಲು ಆದೇಶ ನೀಡಬೇಕೆಂದು ಕೋರಿರುವ ಹಿನ್ನೆಲೆಯಲ್ಲಿ, ದಿನಾಂಕ: 17-12-2007 ರಂದು ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಹಾಗೆಯೇ ರಾಸಾಯನಿಕ ಪರೀಕ್ಷೆಗೆ ತೆಗೆದ ಮಾದರಿಯನ್ನು ಹೊರತುಪಡಿಸಿ, ನಿಯಮಾನುಸಾರ ನಾಶ ಮಾಡಲು ಆದೇಶಿಸಲಾಯಿತು. ಈ ಆದೇಶದಂತೆ ದಿನಾಂಕ: 24-07-2008 ಅಂದು ಮಹಜರ್ ಕ್ರಮ ಜರುಗಿಸಿ ನಿಯಮಗಳಡಿ ನಾಶ ಮಾಡಿ ದಿನಾಂಕ: 19-09-2008 ರ ಪತ್ರದಲ್ಲಿ ಅಬಕಾರಿ ಉಪ ಅಧೀಕ್ಷಕರು, ಕೋಲಾರ ಉಪ ವಿಭಾಗ, ಕೋಲಾರ ರವರು ವರದಿ ಮಾಡಿರುತ್ತಾರೆ.

ನಂತರ, ಪ್ರಕರಣದ ವಿಚಾರಣೆಯನ್ನು ಕೈಗೆತ್ತಿಕೊಂಡು, ವಿಚಾರಣೆ ನಡೆಸಿ ಅರ್ಜಿದಾರರ ಪರವಾಗಿ ವಕೀಲರು ಮತ್ತು ಸಹಾಯಕ ಅಭಿಯೋಗ ನಿರ್ದೇಶಕರ ನಡುವೆ ವಾದ–ಪ್ರತಿವಾದಗಳನ್ನು ಆಲಿಸಿ, ಈ ಪ್ರಕರಣದ ವಾಸ್ತವಾಂಶ ಪ್ರಕರಣದ ವಸ್ತುಸ್ಥಿತಿ ಹಾಗೂ ಲಭ್ಯವಿದ್ದ ಪ್ರಾಪಂಚಿಕ ಸಾಕ್ಷಿ (Material evidence) ಗಳನ್ನು ಆದರಿಸಿ ಈ ಕೆಳಕಂಡ ಅಂಶಗಳಿಗೆ ಉತ್ತರ ಕಂಡುಕೊಳ್ಳಲಾಗಿದೆ.

1. ದಿನಾಂಕ: 27-09-2007 ರ ಬೆಳಗಿನ ಜಾವ 2-00 ಗಂಟೆಯ ಸಮಯದಲ್ಲಿ ಬಂಗಾರಪೇಟೆ ಕಡೆಯಿಂದ ನೋಂದಣಿ ಸಂ: ಕೆಎ–04 ಎಂಸಿ–8258 ಎಂಬ ಮಾರುತಿ ಓಮ್ನಿ ವಾಹನದಲ್ಲಿ ಅಕ್ರಮವಾಗಿ 96 X 180 ಮಿಲಿಯ ಒನ್ ಯುಪಿ ವಿಸ್ಕಿಯನ್ನು ಸಾಗಾಣಿಕೆ ಮಾಡುತ್ತಿದ್ದುದನ್ನು ಸಹಾಯಕ ಆರಕ್ಷಕ ಉಪ ನಿರೀಕ್ಷಕರು, ಕೋಲಾರ ನಗರ ಪೊಲೀಸ್ ಠಾಣೆ ರವರು ಕೋಲಾರ ಆರ್.ಟಿ.ಓ ಕಛೇರಿಯ ಹತ್ತಿರ ಜಪ್ತು ಪಡಿಸಿರುತ್ತಾರೆಯೇ? ಹಾಗೂ ವಾಹನ ಮಾಲೀಕರ ಅರಿವಿನಿಂದ (Knowledge) ಈ ಕೃತ್ಯ ನಡೆದಿದೆಯೇ?
2. ವಾಹನವು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 32 ಮತ್ತು 34 ರ ಅಡಿಯಲ್ಲಿ ಉಲ್ಲಂಘನೆಯಾಗಿದೆಯೇ?
3. ಜಪ್ತುಪಡಿಸಲಾದ ವಾಹನವನ್ನು ಕಾನೂನಿನಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿದೆಯೇ?
4. ಆದೇಶವೇನು?

ಈ ಮೇಲ್ಕಂಡ ವಿವಾದಾಂಶಗಳಿಗೆ ಉತ್ತರ ಈ ಕೆಳಕಂಡಂತಿರುತ್ತದೆ.

1. ಹೌದು.
2. ಹೌದು.
3. ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43(ಎ) ರ ಅಡಿಯಲ್ಲಿ ಅವಕಾಶವಿರುತ್ತದೆ.
4. ಅಂತಿಮ ಆದೇಶದಂತೆ

**ಪ್ರಾ.ಸ–1 :** ಶ್ರೀಮತಿ ರಮಾಮಣಿ, ಅಬಕಾರಿ ಉಪ ನಿರೀಕ್ಷಕರು, ಚಿಂತಾಮಣಿ ಉಪ ವಿಭಾಗ, ಚಿಂತಾಮಣಿ ರವರು ದಿನಾಂಕ: 14-05-2009 ರಂದು ಈ ಪ್ರಾದಿಕಾರದ ಮುಂದೆ ಹಾಜರಾಗಿ, ದಿ: 12-09-2005 ರಿಂದ 20-05-2008 ರವರೆಗೆ ಅಬಕಾರಿ ಉಪ ನಿರೀಕ್ಷಕರಾಗಿ, ಅಬಕಾರಿ ನಿರೀಕ್ಷಕರ ಕಛೇರಿ, ಕೋಲಾರ ವಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಮಯದಲ್ಲಿ, ದಿನಾಂಕ: 05-10-2007 ರಂದು ಕೋಲಾರ ನಗರ ಪೊಲೀಸ್ ಠಾಣೆಯ ಪ್ರವವ ಸಂ: 86 ದಿ:27-09-2007 ರ ಕಡತ ಮತ್ತು ಮಾಲನ್ನು ಪಡೆದು ದಿನಾಂಕ: 25-10-2007 ರಂದು ಅಬಕಾರಿ ರಕ್ಷಕರರಾದ ಶ್ರೀ ಸುಂದರಸಿಂಗ್ ರವರ ಮುಖಾಂತರ ಮಾದರಿಯನ್ನು ರಾಸಾಯನಿಕ ಪರೀಕ್ಷೆಗಾಗಿ ಬೆಂಗಳೂರಿನ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ದಿನಾಂಕ: 30-10-2007 ರಂದು ಫಲಿತಾಂಶ ಪಡೆದಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಸಾಕ್ಷಿದಾರರನ್ನು ಅರ್ಜಿದಾರರ ಪರ ವಕೀಲರು ಪಾಟೀ ಸವಾಲ್ ಮಾಡಿದ್ದು, ನಗರ ಪೊಲೀಸ್ ಠಾಣೆಯಿಂದ 2 ರಟ್ಟಿನ ಪೆಟ್ಟಿಗೆಗಳ ವಿಸ್ಕಿಯನ್ನು ಪಡೆದಿರುತ್ತೇನೆ ಎಂದರೆ ಸರಿ, ಸಾಮಾನ್ಯವಾಗಿ ಮದುವೆ ಇತರೆ ಸಮಾರಂಭಗಳಲ್ಲಿ ಉಪಯೋಗಿಸಲು ಮದ್ಯ ತೆಗೆದುಕೊಂಡು ಹೋಗುವುದಕ್ಕೆ ಅನುಮತಿ ಇರುತ್ತದೆ ಎಂದರೆ ಸರಿಯಲ್ಲ. ಅಂಗಡಿಯಲ್ಲಿ 1 ಕೇಸು ಮಾರಾಟಕ್ಕೆ ಅವಕಾಶವಿದೆ ಎಂಬುದು ಸರಿಯಲ್ಲ. ಮದ್ಯದಂಗಡಿಯಲ್ಲಿ ಚಿಲ್ಲರೆ ಮಾರಾಟಕ್ಕೆ ಕಾನೂನಿನಲ್ಲಿ ಅವಕಾಶವಿದೆ ಎಂದರೆ ಸರಿಯಲ್ಲ. ಜಪ್ತು ಮಾಡಿದ ಮದ್ಯವು ಮಾನವನ ಸೇವನೆಗೆ ಯೋಗ್ಯವಾಗಿದೆ ಎಂದರೆ ಸರಿ ಎಂದು ಸಾಕ್ಷಿ ಸಾಕ್ಷ್ಯ ನುಡಿದಿರುತ್ತಾರೆ.

**ಪ್ರಾ.ಸಾ–2:–** ಶ್ರೀ ಎಂ.ಶಾಮಪ್ಪ ಬಿನ್ ಲೇಟ್ ಮುನಿಸ್ವಾಮಿ, ವಯಸ್ಸು 59 ವರ್ಷ, ಆರಕ್ಷಕ ಉಪ ನಿರೀಕ್ಷಕರು, ಕೋಲಾರ ನಗರ ಪೊಲೀಸ್ ಠಾಣೆ ಇವರು ದಿ: 25-09-2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ, ದಿನಾಂಕ: 22-05-2005 ರಿಂದ ಕೋಲಾರ ನಗರ ಪೊಲೀಸ್ ಠಾಣೆಯಲ್ಲಿ ಸಹಾಯಕ ಆರಕ್ಷಕ ಉಪ ನಿರೀಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ದಿನಾಂಕ: 26-09-2007 ರಂದು ರಾತ್ರಿ ಸಿಬ್ಬಂದಿಯೊಂದಿಗೆ ಕೋಲಾರ ನಗರದಲ್ಲಿ ಗಸ್ತು ಮಾಡಿಕೊಂಡು, ಬಂಗಾರಪೇಟೆ ರಸ್ತೆಯಲ್ಲಿರುವ ಆರ್.ಟಿ.ಓ ಕಛೇರಿಯ ಹತ್ತಿರ ಬಂದಾಗ, ಬಂಗಾರಪೇಟೆ ಕಡೆಯಿಂದ ಒಂದು ಮಾರುತಿ ಓಮ್ನಿ ವ್ಯಾನ್ ಬರುತ್ತಿದ್ದು ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ವಾಹನವನ್ನು ನಿಲ್ಲಿಸಿ ಕತ್ತಲಲ್ಲಿ ಓಡಿ ಹೋಗಿರುತ್ತಾರೆ. ನಂತರ ಜೊತೆಯಲ್ಲಿದ್ದ ಪೇದೆಗಳ ಸಹಾಯದಿಂದ ವಾಹನವನ್ನು ಶೋಧನೆ ಮಾಡಲಾಗಿ, ಹಿಂದಿನ ಸೀಟಿನಲ್ಲಿ ಎರಡು ರಟ್ಟಿನ ಪೆಟ್ಟಿಗೆಗಳಿದ್ದವು, ಅವುಗಳನ್ನು ಅಜಮಾಯಿಷಿ ಮಾಡಿ ನೋಡಲಾಗಿ, ಒಂದೊಂದು ಪೆಟ್ಟಿಗೆಯಲ್ಲಿ 48 ಸೀಸೆಗಳಂತೆ ಒಟ್ಟು 96 ಸೀಸೆಗಳ ಒನ್ ಅಫ್ ವಿಸ್ಕಿ (1 UP whisky) ಇತ್ತು. ಇದು ಕಾನೂನು ಬಾಹಿರವಾಗಿ ಸಾಗಾಣಿಕೆ ಮಾಡುತ್ತಿದ್ದ ಮದ್ಯವೆಂದು ಪರಿಗಣಿಸಿ ಪಂಚರ ಸಮ್ಮುಖದಲ್ಲಿ ಜಪ್ತುಪಡಿಸಲಾಯಿತು. ತದನಂತರ ವಾಹನವನ್ನು ಪರಿಶೀಲಿಸಲಾಗಿ, ಸಿಲ್ವರ್ ಬಣ್ಣದ್ದಾಗಿದ್ದು, ನೋಂದಣಿ ಸಂ: ಕೆಎ–04 ಎಂಸಿ–8258 ಎಂಬುದಾಗಿರುತ್ತದೆ. ರಾತ್ರಿ 2-15 ಗಂಟೆಯಿಂದ 3-00 ಗಂಟೆಯವರೆಗೆ ಮಹಜರ್ ಕ್ರಮ ಮಾಡಿ, ಜಪ್ತುಪಡಿಸಿರುವ ಮದ್ಯದ ಪೈಕಿ 8 ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗೆ ಮಾದರಿಯಾಗಿ ತೆಗೆದು, ಅವುಗಳ ಬಾಯಿಗೆ ಬಟ್ಟೆ ಸುತ್ತಿ ಅರಗಿನಿಂದ 'ಹೆಚ್'

ಎಂಬ ಸೀಲುನಿಂದ ಮೊಹರು ಮಾಡಲಾಯಿತು. ನಂತರ ರಾತ್ರಿ 3-15 ಗಂಟೆಗೆ ಠಾಣೆಗೆ ಬಂದು ಪವವ ಸಂ: 86 ರಂತೆ ಮೊಕದ್ದಮೆ ದಾಖಲಿಸಿ ಮುಂದಿನ ತನಿಕೆಗಾಗಿ ಆರಕ್ಷಕ ಉಪ ನಿರೀಕ್ಷಕರವರಿಗೆ ಹಸ್ತಾಂತರಿಸಲಾಯಿತು ಎಂದು ಸಾಕ್ಷಿ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ.

ಅರ್ಜಿದಾರರ ಪರವಾಗಿ ವಕೀಲರು ಪಾಟೀ ಸವಾಲು ಮಾಡಿದ್ದು, ಠಾಣೆಯಲ್ಲಿ ಗಸ್ತು ಕಾರ್ಯದ ಬಗ್ಗೆ ದಾಖಲಾತಿಗಳನ್ನು ನಿರ್ವಹಿಸಿರುತ್ತೆ. ನಮಗೂ ಓಡಿ ಹೋದ ಅಪರಾಧಿಗಳ ಮಧ್ಯೆ 15 ಅಡಿ ಅಂತರವಿತ್ತು. ಕತ್ತಲು ಇದುದ್ದರಿಂದ ಓಡಿ ಹೋದವರನ್ನು ಹಿಡಿಯಲು ಸಾಧ್ಯವಾಗಲಿಲ್ಲ. ಮಹಜರಿಗೆ ನಾವುಗಳಲ್ಲದೆ ಪಂಚರೂ ಸಹ ಸಹಿ ಮಾಡಿರುತ್ತಾರೆ. ಪಂಚರು ಇಟ್ಟಿಗೆ ಫ್ಯಾಕ್ಟರಿಗೆ ಕೆಲಸಕ್ಕೆ ಹೋಗುತ್ತಿದ್ದವರನ್ನು ಕರೆದು ಪಂಚನಾಮೆ ನಡೆಸಿರುತ್ತೇವೆ. ಮಾಲಿನ ವಾರಸುದಾರರು ಯಾರೂ ಇಲ್ಲದಿರುವ ಕಾರಣ ಇದು ಅಧಿಕೃತವೇ ಎಂದು ಖಚಿತಪಡಿಸಲು ಸಾಧ್ಯವಾಗಲಿಲ್ಲ. ರಾಸಾಯನಿಕ ವಿಶ್ಲೇಷಣೆ ವರದಿಯಲ್ಲಿ ಮದ್ಯವು ಮಾನವನ ಸೇವೆಗೆ ಯೋಗ್ಯವಾಗಿರುತ್ತದೆ ಎಂದರೆ ಸರಿ. ವಾಹನ ಚಾಲಕನು ಮಾಲೀಕರ ಮನೆಯಲ್ಲಿ ನಡೆಯಲಿರುವ ಸಮಾರಂಭಕ್ಕೆ ತೆಗೆದುಕೊಂಡು ಹೋಗುತ್ತಿದ್ದು, ನೀವು ಸುಳ್ಳು ಮೊಕದ್ದಮೆ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. ಮೂರು ಪೆಟ್ಟಿಗೆಗಳು (48 X 180) ಹೊಂದಲು ಕಾನೂನಿನಲ್ಲಿ ಅವಕಾಶವಿದ್ದರೂ, ಇಲ್ಲವೆಂದು ಮೊಕದ್ದಮೆ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. ಮಾರನೆಯ ದಿನ ವಾಹನ ಮಾಲೀಕರು ಬಂದು ವಿಚಾರಿಸಿದಾಗ ಪ್ರಕರಣ ದಾಖಲಿಸಲಾಗಿದೆ ಎಂದು ಹೇಳಿರುವುದು ಸರಿ, ಆಧಾರ ಇಲ್ಲದೆ ಸುಳ್ಳು ಮೊಕದ್ದಮೆ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. ಮಹಜರು ಠಾಣೆಯಲ್ಲಿ ಬರೆದಿರುತ್ತೀರಿ ಎಂದರೆ ಸರಿಯಲ್ಲ ಎಂದು ಪಾಟೀ ಸವಾಲಿನಲ್ಲಿ ನುಡಿದಿರುತ್ತಾರೆ. ಪಾಟಿ ಸವಾಲಿನಲ್ಲಿ ಯಾವುದೇ ತದ್ವಿರುದ್ಧ ಸಾಕ್ಷ್ಯಯನ್ನು ನುಡಿದಿರುವುದಿಲ್ಲ.

ಸದರಿ ಪ್ರಕರಣದಲ್ಲಿ ಅರ್ಜಿದಾರರ ಪರ ವಕೀಲರು, ಪಾಟೀ ಸವಾಲಿನಲ್ಲಿ ಕಲಂ 32, 34 ಕ್ಕೆ ಸಂಬಂಧಿಸಿದಂತೆ ಪಾಟೀ ಸವಾಲು ಮಾಡಿರುತ್ತಾರೆಯೇ ವಿನಹ ಪ್ರಮುಖವಾಗಿ ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43(ಎ) ಗೆ ಸಂಬಂಧಿಸಿದಂತೆ ಅಂದರೆ ಕೃತ್ಯ ಬಗ್ಗೆ ಅರ್ಜಿದಾರರಿಗೆ ಮಾಹಿತಿ ಇತ್ತೆ ಅಥವಾ ಇಲ್ಲವೇ ಎಂಬುದರ ಬಗ್ಗೆ ಪಾಟೀ ಸವಾಲು ಮಾಡಿರುವುದಿಲ್ಲ. ಆದ್ದರಿಂದ ಪ್ರಾ.ಸಾ–2 ಸಾಕ್ಷ್ಯವನ್ನು ತಳ್ಳಿ ಹಾಕುವುದಕ್ಕೆ ಅಂದರೆ ಸಂಶಯದಿಂದ ನೋಡುವುದಕ್ಕೆ ಯಾವುದೇ ಸ್ಪಷ್ಟ ಕಾರಣಗಳು ಅರ್ಜಿದಾರರು ತೋರಿಸದೇ ಇದ್ದುದರಿಂದ ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಲಾಗಿರುತ್ತದೆ.

ಅರ್ಜಿದಾರರ ಸಾಕ್ಷಿ:– ಎಂ.ರಾಮಮೂರ್ತಿ ಬಿನ್ ಮೋಟಪ್ಪ, ವಯಸ್ಸು 53 ವರ್ಷ, ಗೆದ್ದಲಹಳ್ಳಿ, ಬೆಂಗಳೂರು ಇವರು ಈ ಪ್ರಾಧಿಕಾರದ ಮುಂದೆ ದಿನಾಂಕ: 26-03-2010 ರಂದು ಹಾಜರಾಗಿ, ಪ್ರಕರಣದಲ್ಲಿ ಜಪ್ತಿಯಾಗಿರುವ ನೋಂದಣಿ ಸಂ: ಕೆಎ–04 ಎಂಸಿ–8258 ರ ವಾಹನಕ್ಕೆ ಮಾಲೀಕನಾಗಿದ್ದು, ದಿನಾಂಕ: 26-09-2007 ರಂದು ರಾತ್ರಿ ಜಪ್ತಿ ಮಾಡಿದ ಸಮಯದಲ್ಲಿ ಚಾಲಕ ಮತ್ತು ಮೂವರು ಸಂಬಂಧಿಕರು ಒಟ್ಟು 4 ಜನ ಪ್ರಯಾಣಿಸುತ್ತಿದ್ದ ಸಂದರ್ಭದಲ್ಲಿ ಕೋಲಾರ ಆರ್.ಟಿ.ಓ ಕಛೇರಿಯ ಮುಂಭಾಗದಲ್ಲಿ ಗಸ್ತಿನಲ್ಲಿದ್ದ ಪೊಲೀಸರು ಸದರಿ ವಾಹನವನ್ನು ನಿಲ್ಲಿಸಿ ಚಾಲಕನನ್ನು ವಿಚಾರಣೆ ಮಾಡುವ ಸಮಯದಲ್ಲಿ ಭಯಬಿದ್ದು ಚಾಲಕ ಮತ್ತು ಇತರೆ ಮೂವರು ಓಡಿ ಹೋಗಿರುತ್ತಾರೆ. ನಂತರ ನಮ್ಮ ಚಾಲಕ ದೂರವಾಣಿ ಮೂಲಕ ವಿಚಾರ ತಿಳಿಸಿರುತ್ತಾರೆ. ನಂತರ ಮಾರನೆಯ ದಿನ ಬೆಳಿಗ್ಗೆ ಪೊಲೀಸ್ ಠಾಣೆಯನ್ನು ಸಂಪರ್ಕಿಸಿದಾಗ ಸದರಿ ವಾಹನದ ಬಗ್ಗೆ ರಾತ್ರಿಯೇ ಮೊಕದ್ದಮೆ ದಾಖಲು ಮಾಡಿ ಪ್ರಕರಣ ಮುಂದುವರೆದಿದೆ ಎಂದು ತಿಳಿದುಬಂದಿದೆ. ವಾಹನದಲ್ಲಿ 96 ಬಾಟಲುಗಳು ವಿಸ್ಕಿಯು 2 ಕಾರ್ಟನ್ ಬಾಕ್ಸ್‌ಗಳಲ್ಲಿದ್ದ ಬಗ್ಗೆ ಪ್ರಕರಣ ಹೂಡಿರುತ್ತಾರೆ. ನಾಲ್ಕು ಜನರ ಹೆಸರಿಗೆ ಸದರಿ ಬಾಟಲುಗಳನ್ನು ಸಮಾರಂಭಕ್ಕಾಗಿ ಖರೀದಿಸಿ ತಂದಿರುತ್ತಾರೆಂದು ತಿಳಿಸಿರುತ್ತಾರೆ. ಒಬ್ಬರಿಗೆ 24 ಬಾಟಲುಗಳಂತೆ, 4 ಜನಕ್ಕೆ ಒಟ್ಟು 96 ಬಾಟಲುಗಳು ತೆಗೆದುಕೊಂಡಿರುತ್ತಾರೆ. ಇದು ಪರ್ಮಿಟ್ ಸ್ಟಾಕ್ ಆಗಿದ್ದು, ಯಾವುದೇ ತರವಾದ ಅಕ್ರಮ ಮದ್ಯವಾಗಿರದೆ ಸ್ವಂತ ಉಪಯೋಗಕ್ಕೆ ತೆಗೆದುಕೊಂಡು ಹೋಗುತ್ತಿರುವುದಾಗಿ ನುಡಿದಿರುತ್ತಾರೆ. ಸದರಿ ಚಾಲಕನ ಮೇಲೆ ದಾಖಲಿಸಿರುವ ಕ್ರಿಮಿನಲ್ ಮೊಕದ್ದಮೆಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಸದರಿ ಚಾಲಕನು ಈಗ ನನ್ನಲ್ಲಿ ಕೆಲಸ ಮಾಡುತ್ತಿಲ್ಲ ಎಂದು ತಿಳಿಸಿರುತ್ತಾನೆ. ವಾಹನದ ಮಾಲೀಕತ್ವವನ್ನು ರುಜುವಾತು ಮಾಡಲು ಆರ್.ಸಿ. ನಕಲನ್ನು ನೀಡಿರುತ್ತೇನೆ. ಅದನ್ನು ನಿಶಾನೆ–1 ಎಂದು ಗುರುತಿಸಿರುತ್ತಾರೆ. ಪಾಟಿ ಸವಾಲು ಮುಂದೂಡಲಾಗಿದೆ.

ದಿನಾಂಕ: 12-11-2010 ರಂದು ಸರ್ಕಾರಿ ಸಹಾಯಕ ಅಭಿಯೋಜಕರಿಂದ ಪಾಟಿ ಸವಾಲು, ನೀವು ತೆಗೆದುಕೊಂಡು ಹೋಗುತ್ತಿದ್ದ ಮದ್ಯದ ಬಾಟಲುಗಳಿಗೆ ದಾಖಲಾತಿಗಳು ಏನಾದರು ಇತ್ತೆ? ಇಲ್ಲ ಕಾರಣ 1-2 ಬಾಟಲು ತೆಗೆದುಕೊಂಡು ಹೋಗುವುದಕ್ಕೆ ಯಾವುದೇ ದಾಖಲೆಗಳು ಕೊಡುವುದಿಲ್ಲ. ಈ ರೀತಿ ಯಾವುದೇ ದಾಖಲಾತಿಗಳಿಲ್ಲದೆ ಮದ್ಯ ಸಾಗಾಣಿಕೆ ಮಾಡುವುದು ಅಪರಾಧ ಎಂಬುದು ಗೊತ್ತಿದ್ದರೂ ಸಾಗಾಣಿಕೆ ಮಾಡಿರುತ್ತೀರಿ? ದಾಖಲೆಗಳಿದ್ದರೆ ಸಾಗಾಣಿಕೆ ಮಾಡುವುದು ಅಪರಾಧ ಎಂಬುದು ಗೊತ್ತಿಲ್ಲ. ಮನೆಯಲ್ಲಿ ನಡೆಯುತ್ತಿದ್ದ ಪಂಕ್ಷನ್‌ಗಳಿಗೆ ಯಾವಾಗಲೂ ಮದ್ಯವನ್ನು ತೆಗೆದುಕೊಂಡು ಹೋಗುತ್ತೀರಾ? ಪಂಕ್ಷನ್ ಇದ್ದಾಗ ತೆಗೆದು ಹೋಗುತ್ತೇನೆ. ಅವರು ಮದ್ಯ ತರಲು ಹೋದಾಗ ನಿಮಗೆ ಹೇಳಿ ಹೋಗಿದ್ದರಾ? ಹೇಳಿದ್ದರು, ಈ ರೀತಿ ಯಾವುದೇ ದಾಖಲೆಗಳಿಲ್ಲದೆ ಸಾಗಾಣಿಕೆ ಮಾಡುವುದು ಕಾನೂನು ಬಾಹಿರ ಎಂಬುದು ನೀವು ಅವರಿಗೆ ತಿಳಿಸಲಿಲ್ಲವೇ? ಹೇಳಿರುವುದಿಲ್ಲ, ಮನೆಯಲ್ಲಿ ಯಾವ ಪಂಕ್ಷನ್ ಇತ್ತು ಎಂಬುದಕ್ಕೆ ಮಗುವಿನ ಕೂದಲು ತೆಗೆಯುವ ಪಂಕ್ಷನ್ ಎಂದು ತಿಳಿಸಿ ಮಗುವಿನ ಹೆಸರು ಗೊತ್ತೆ ಎಂಬುದಕ್ಕೆ ಇಲ್ಲ ಎಂದು ಸಾಕ್ಷಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಈ ಪ್ರಾಧಿಕಾರದ ಮುಂದೆ ಯಾವುದಾದರು ದಾಖಲೆಯನ್ನು ಹಾಜರುಪಡಿಸಿರುತ್ತೀರ ಎಂಬುದಕ್ಕೆ ಇಲ್ಲ ಎಂದು ಇದು ಕಾನೂನು ಬಾಹಿರ ಎಂದು ಗೊತ್ತಿದ್ದರೂ ಸುಳ್ಳನ್ನು ಹೇಳುತ್ತಿದ್ದೀರಿ ಎಂಬುದಕ್ಕೆ ನಿಜ ಹೇಳುತ್ತಿದ್ದೇನೆ ಎಂದು ನುಡಿದಿರುತ್ತಾನೆ. ಸದರಿ ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಲಾಗಿ ಸದರಿ ಮದ್ಯ ಸಾಗಾಣಿಕೆಯ ಮಾಹಿತಿ ಅರ್ಜಿದಾರರಿಗೆ ಇತ್ತು ಎಂಬುದನ್ನು ಸಹಾಯಕ ಅಭಿಯೋಜಕ ನಿರ್ದೇಶಕರು ರುಜುವಾತು ಪಡಿಸಿರುತ್ತಾರೆ.

ಇವರು ದಿನಾಂಕ: 20-11-2007 ರಲ್ಲಿ ವಾಹನ ಮಧ್ಯಂತರ ಬಿಡುಗಡೆಗೆ ಅರ್ಜಿ ಸಲ್ಲಿಸಿದ್ದು ಅದರಲ್ಲಿ ಚಾಲಕ ಮತ್ತು ಆತನ ಸ್ನೇಹಿತರು ಕುಡಿಯಲು ಬಿಲ್ಲಿನ ಮೂಲಕ ಖರೀದಿಸಿದ ಮದ್ಯವೆಂದು ಬರವಣಿಗೆಯಲ್ಲಿ ನೀಡಿ, ಸಾಕ್ಷ್ಯ ನುಡಿಯುವ ಸಮಯದಲ್ಲಿ ಚಾಲಕ ಮತ್ತು 3 ಜನ ಸಂಬಂಧಿಕರು ಪಂಕ್ಷನ್‌ಗೆ ತೆಗೆದುಕೊಂಡು ಬಂದಿರುವರೆಂದು 1-2 ಬಾಟಲುಗಳು ಖರೀದಿಸಿದರೆ ಬಿಲ್ಲು ನೀಡುವುದಿಲ್ಲವೆಂದು ತಪ್ಪು ಸಾಕ್ಷ್ಯ ನುಡಿದಿರುತ್ತಾರೆ ಹಾಗೂ ಪಾಟಿ ಸವಾಲಿನಲ್ಲಿ ಪಂಕ್ಷನ್‌ಗಾಗಿ ಮದ್ಯ ತರುತ್ತೇವೆ ಎಂದು ತಿಳಿಸಿದ್ದರು ಮತ್ತು ದಾಖಲೆಗಳಿಲ್ಲದೆ ಮದ್ಯ ಸಾಗಾಣಿಕೆ ಮಾಡುವುದು ಕಾನೂನು ಬಾಹಿರವೆಂದು ಗೊತ್ತಿಲ್ಲವೆಂದು ನುಡಿದಿರುವುದರಿಂದ, ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡಿರುವುದು ಇವರಿಗೆ ಮಾಹಿತಿ ಇತ್ತು ಎಂದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಅಪರಾಧಿ ಸಹ ವಾಹನದಲ್ಲಿ ಮದ್ಯ ಸಾಗಾಣಿಕೆ ಮಾಡಿರುವುದು ನಿಜವೆಂದು ವಾಹನ ಮಾಲೀಕರು ಒಪ್ಪಿಕೊಂಡಿರುವುದರಿಂದ, ಈ ಅಪರಾಧ ಕೃತ್ಯ ನಡೆದಿರುವುದು ನಿಜವೆಂದು ಸ್ಪಷ್ಟವಾಗಿ ರುಜುವಾತಾಗಿರುತ್ತದೆ.

ದಿನಾಂಕ: 03-12-2010 ರಂದು ಅರ್ಜಿದಾರರು ಅಂದರೆ ವಾಹನದ ಮಾಲೀಕರು ಈ ಪ್ರಾಧಿಕಾರಕ್ಕೆ ಒಂದು ಅರ್ಜಿ ಸಲ್ಲಿಸಿ, ಶ್ರೀಮತಿ ರಮಾಮಣಿ, ಅಬಕಾರಿ ಉಪ ನಿರೀಕ್ಷಕರು (ಪಿಡಬ್ಲ್ಯು–1) ರವರು ಜಪ್ತುಪಡಿಸಿದ ಮಾಲು ಮತ್ತು ಪ್ರಕರಣದ ಕಡತ ಫಿರ್ಯಾದುದಾರರಿಂದ ಸ್ವೀಕರಿಸಿ, ಮುಂದಿನ ತನಿಖೆ ಮತ್ತು ಮಾದರಿಯನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುತ್ತಾರೆಯೇ ವಿನಃ ಇದು ಪ್ರಾಪಂಚಿಕ ಸಾಕ್ಷ್ಯ (Material evidence) ಅಲ್ಲವೆಂದು ತಿಳಿಸಿರುತ್ತಾರೆ.

ಇದೂ ಅಲ್ಲದೆ ಸಾಕ್ಷಿದಾರರಾದ ಪಿಡಬ್ಲ್ಯು–3 ಶ್ರೀ ಎಂ.ರಾಮಮೂರ್ತಿ ರವರು ಪಂಕ್ಷನ್‌ಗಾಗಿ 180 ಮಿಲಿಯ 96 ಬಾಟಲುಗಳ ವಿಸ್ಕಿಯನ್ನು ಕೋಲಾರದ ಮದ್ಯದಂಗಡಿಯಿಂದ ಖರೀದಿಸಿ ಮಾರುತಿ ವ್ಯಾನಿನಲ್ಲಿ ಸಾಗಾಣಿಕೆ ಮಾಡಿರುವುದು ನಿಜವೆಂದು, ಅಬಕಾರಿ ನಿಯಮ 21 ರಂತೆ ಒಬ್ಬ ಮನುಷ್ಯ 24 ಬಾಟಲಿನಂತೆ 4 ಜನರು 96 ಬಾಟಲುಗಳು ಸ್ವಂತ ಉಪಯೋಗಕ್ಕೆ ಖರೀದಿಸಿ ಸಾಗಾಣಿಕೆ ಮಾಡುವುದಕ್ಕೆ ಅವಕಾಶವಿದೆಯೆಂದು ಹೇಳಿ, ಮಹಜರ್ ಸಾಕ್ಷಿದಾರರಾದ ಗಂಗಾಧರ ಮತ್ತು ಕೃಷ್ಣ ಎಂಬುವರ ಸಾಕ್ಷ್ಯ ಪಡೆದಿರುವುದರಿಂದ ಮಹಜರ್ ರುಜುವಾತು ಆಗಿರುವುದಿಲ್ಲವೆಂದು ನಿವೇದಿಸಿಕೊಂಡು ಪ್ರಕರಣವನ್ನು ಕೈಬಿಟ್ಟು ವಾಹನ ಮತ್ತು ಬ್ಯಾಂಕ್ ಗ್ಯಾರಂಟಿಯನ್ನು ವಾಪಸ್ಸು ಕೊಡುವಂತೆ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

ಈ ಪ್ರಕರಣದ ಎಲ್ಲಾ ಸಾಕ್ಷ್ಯಾಧಾರಗಳು, ಪ್ರಾಪಂಚಿಕ ಸಾಕ್ಷ್ಯ, ವಸ್ತುಸ್ಥಿತಿಯನ್ನು ಪರಿಶೀಲಿಸಲಾಗಿ, ಶ್ರೀ ಎಂ.ಶಾಮಪ್ಪ, ಫಿರ್ಯಾದುದಾರರಾಗಿ ಮತ್ತು ಶ್ರೀಮತಿ ರಮಾಮಣಿಯು ತನಿಖಾಧಿಕಾರಿಯಾಗಿ, ಜಪ್ತುಪಡಿಸಿದ ಮದ್ಯವನ್ನು ರಾಸಾಯನಿಕ ತಜ್ಞರಿಗೆ ಕಳುಹಿಸಿ ಫಲಿತಾಂಶ ಪಡೆದಿರುತ್ತಾರೆ. ಈ ಸಾಕ್ಷಿದಾರರು ಪ್ರಮುಖ ಸಾಕ್ಷ್ಯಧಾರರಾಗಿ ಸಾಕ್ಷ್ಯ ನುಡಿದಿರುವುದು ಅಲ್ಲಗೆಳೆಯುವಂತದಲ್ಲ. ಆದರೆ ಸದರಿ ಸಾಕ್ಷಿಗಳನ್ನು ಔಪಚಾರಿಕವಾಗಿ ಪಾಟಿ ಸವಾಲು ಮಾಡಿದ್ದು, ಸದರಿ ಸಾಕ್ಷಿಗಳನ್ನು ಸಂಶಯದಿಂದ ಕಾಣುವುದಕ್ಕೆ ಅಥವಾ ನಂಬದೇ ಇರುವುದಕ್ಕೆ ಯಾವುದೇ ಸ್ಪಷ್ಟ ನಿದರ್ಶನಗಳು ಇಲ್ಲದೇ ಇರುವುದರಿಂದ ಸದರಿ ಸಾಕ್ಷಿದಾರರ ಸಾಕ್ಷ್ಯವನ್ನು ನಂಬಲರ್ಹ ಸಾಕ್ಷಿಗಳು ಎಂದು ಪರಿಗಣಿಸಲಾಗಿದೆ.

ಮಹಜರ್ ಸಾಕ್ಷಿಗಳಾದ "ಗಂಗಾಧರ'' ಈಗಾಗಲೇ ಪಾವತಿಯಾಗಿದ್ದು, ಕೃಷ್ಣ ಎಂಬುವರು ಅವರು ನೀಡಿರುವ ವಿಳಾಸದಲ್ಲಿಲ್ಲವೆಂದು ವರದಿಯಾಗಿರುತ್ತದೆ. 96 ಬಾಟಲುಗಳ ಮದ್ಯವನ್ನು ನಾಲ್ಕು ಜನರು ಖರೀದಿಸಿರುವುದಕ್ಕೆ ಯಾವುದೇ ದಾಖಲೆಗಳಿರುವುದಿಲ್ಲ ಹಾಗೂ ನಿಜವಾಗಿ ಒಬ್ಬರಿಗೆ 24 ಬಾಟಲುಗಳಂತೆ ಒಟ್ಟು 96 ಬಾಟಲುಗಳು ಮದ್ಯದಂಗಡಿಯಲ್ಲಿ ಖರೀದಿಸಿದ್ದರೆ, ಇದು ಅಪರಾಧವಲ್ಲವೆಂದು ಅಪರಾಧಿಗಳಿಗೆ ತಿಳಿದಿದ್ದರೆ ಅವರು ಓಡಿ ಹೋಗುತ್ತಿರಲಿಲ್ಲ. ಆದ್ದರಿಂದ ಅರ್ಜಿದಾರರ ವಾದವನ್ನು ನಂಬಲರ್ಹವಾಗಿರುವುದಿಲ್ಲ. ಮದ್ಯದಂಗಡಿಯವರು ನಿಗದಿಪಡಿಸಿರುವ ಮಿತಿಯೊಳಗೆ ಮದ್ಯ ಮಾರಾಟ ಮಾಡಿದ್ದಕ್ಕೆ ಬಿಲ್ ನೀಡಲು ಕಡ್ಡಾಯ ನಿಯಮವಿರುವುದರಿಂದ ಬಿಲ್ಲನ್ನು ಕೊಡುತ್ತಿರುತ್ತಾರೆ. ಆದ್ದರಿಂದ ಬಿಲ್ ನೀಡಿರುವುದಿಲ್ಲ ಎಂಬುದು ನಂಬಲರ್ಹವಾದ ಸಾಕ್ಷ್ಯ ಆಗಿರುವುದಿಲ್ಲ.

ವಾಹನ ಮಾಲೀಕರು ವಾಹನದಲ್ಲಿ ಅಕ್ರಮ ಮದ್ಯ ಸಾಗಾಣಿಕೆ ಮಾಡಿರುವುದು ನಿಜವೆಂದು, ಅದು ಅವರಿಗೆ ಮಾಹಿತಿ ಇತ್ತೆಂದು ಸಾಕ್ಷ್ಯ ನುಡಿದು ಸ್ವತಃ ಒಪ್ಪಿಕೊಂಡಿರುವುದರಿಂದ ಮಹಜರ್ ಸಾಕ್ಷಿಗಳನ್ನು ವಿಚಾರಣೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ ಪ್ರಕರಣದಲ್ಲಿ, ಪ್ರಾ.ಸಾ – 1 ಮತ್ತು 2 ಇವರ ಸಾಕ್ಷ್ಯ ಮತ್ತು ಪ್ರಾಪಂಚಿಕ ಸಾಕ್ಷ್ಯ (Material evidence) ಗಳನ್ನು ಮತ್ತು ದಾಖಲೆಗಳನ್ನು ನಂಬದೇ ಇರುವುದಕ್ಕೆ ಯಾವುದೇ ಸ್ಪಷ್ಟ ಸಮಂಜಸ ಕಾರಣಗಳಿರುವುದಿಲ್ಲ ಮತ್ತು ಅರ್ಜಿದಾರರು ತಮ್ಮ ಪಾಟಿ ಸವಾಲಿನಲ್ಲಿ ಮತ್ತು ದಾಖಲೆಗಳಿಂದ ಸದರಿ ಕೃತ್ಯದ ಬಗ್ಗೆ ಮಾಹಿತಿ ಇರಲಿಲ್ಲವೆಂದು ಅಥವಾ ತನ್ನ ಗಮನಕ್ಕೆ ಬರಲಿಲ್ಲವೆಂಬುದರ ಬಗ್ಗೆ ರುಜುವಾತುಪಡಿಸಲು ವಿಫಲರಾಗಿರುತ್ತಾರೆ ಮತ್ತು ವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡಿರುವುದು ನಿಜವೆಂದು ಲಿಖಿತ ಮೂಲಕ ತಿಳಿಸಿರುತ್ತಾರೆ. ಆದ್ದರಿಂದ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಸರ್ವ ವಿಧದಲ್ಲೂ ಯೋಗ್ಯವಾಗಿರುತ್ತದೆಂದು ಪರಿಗಣಿಸಿ ಈ ಕೆಳಕಂಡ ಆದೇಶ.

## ಆದೇಶ

ಟಿ.ಆರ್.ಜಯಸಿಂಹ, ಪ್ರಾಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಉಪ ಆಯುಕ್ತರು, ಕೋಲಾರ ಜಿಲ್ಲೆ, ಕೋಲಾರ ಜಿಲ್ಲೆ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43(ಬಿ) ಅಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿ, ಕಲಂ 43(ಎ) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸಹಾಯಕ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಕೋಲಾರ ನಗರ ಜಿಲ್ಲೆ, ಕೋಲಾರ ರವರ ಪ್ರವವ ಸಂ: 86, ದಿನಾಂಕ: 27-09-2007 ರಲ್ಲಿ ಜಪ್ತುಪಡಿಸಲಾದ ಮಾರುತಿ ಓಮ್ನಿ ನೋಂದಣಿ ಸಂ: ಕೆಎ–04 ಎಂಸಿ–8258 ಅನ್ನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43(ಎ) (2) ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಈ ಪ್ರಾಧಿಕಾರದಿಂದ ದಿನಾಂಕ: 16-10-2007 ರಂದು ವಾಹನವನ್ನು ತಾತ್ಕಾಲಿಕವಾಗಿ ಮಧ್ಯಂತರ ಬಿಡುಗಡೆಗೆ ಹೊರಡಿಸಿರುವ ಆದೇಶವನ್ನು ರದ್ದುಗೊಳಿಸಿದೆ. ವಾಹನದ ನೋಂದಣಿ ಮಾಲೀಕರು (R.C. Owner) ಸದರಿ ಮಧ್ಯಂತರ ಬಿಡುಗಡೆ ಹೊಂದಿರುವ ಮಾರುತಿ ಓಮ್ನಿ ಸಂ: ಕೆಎ–04 ಎಂಸಿ–8258 ಅನ್ನು ಈ ಆದೇಶದ 30 ದಿವಸಗಳೊಳಗಾಗಿ ಈ ಪ್ರಾಧಿಕಾರದ ಅಂದರೆ ಅಬಕಾರಿ ನಿರೀಕ್ಷಕರು, ಕೋಲಾರ ವಲಯ, ಕೋಲಾರ ರವರ ವಶಕ್ಕೆ ಒಪ್ಪಿಸಲು ಆದೇಶಿಸಿದೆ. ತಪ್ಪಿದ್ದಲ್ಲಿ ಭದ್ರತೆಗಾಗಿ ನೀಡಿರುವ ರೂ.70000/- ಗಳ ಬ್ಯಾಂಕ್ ಗ್ಯಾರಂಟಿ ಸಂ: 3/2007 ದಿನಾಂಕ: 18-10-2007 ಅನ್ನು ಇನ್‌ವೋಕ್ ಮಾಡಿ ಅದರ ಮೌಲ್ಯದ ಮೊತ್ತವನ್ನು ಪಡೆದು ಸರ್ಕಾರಕ್ಕೆ ಜಮಾ ಮಾಡಲಾಗುವುದು.

ಈ ಆದೇಶವನ್ನು ಉಕ್ತಲೇಖನ ನೀಡಿ ಗಣಕ ಯಂತ್ರದಲ್ಲಿ ಅಳವಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 24-12-2010 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

**ಟಿ.ಆರ್.ಜಯಸಿಂಹ,**
ಪ್ರಾಧಿಕೃತ ಅಧಿಕಾರಿಗಳು ಹಾಗೂ
ಅಬಕಾರಿ ಉಪ ಆಯುಕ್ತರು,
ಕೋಲಾರ ಜಿಲ್ಲೆ, ಕೋಲಾರ.

ಪಿಆರ್–1796